# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:02 • ಸಂಚಿಕೆ:11 • ನೋಂದಣಿ ನಂ.:KARKAN27911 • ವಿಜಯನಗರ • 03.07.2024 • ಬುಧವಾರ • ಪುಟ:04 • ಬೆಲೆ:2
Volume:02 • Issue:11 • Reg.No:KARKAN27911 • VIJAYANAGARA • 03.07.2024 • Wednesday • Page:04 • Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

# ಜನರ ಆರೋಗ್ಯ ತಪಾಸಣೆಗೆ ಮೆಡಿಕಲ್ ಕಿಟ್

## ಜನಸ್ಪಂದನ ಕಾರ್ಯಕ್ರಮದಲ್ಲಿ ವೈದ್ಯಕೀಯ ಸಿಬ್ಬಂದಿಗೆ ಕಿಟ್ ವಿತರಣೆ | ಅರ್ಜಿ ಸಲ್ಲಿಸಿದ ದಿನವೇ ನೆರವು ಮಂಜೂರು

## ಮಕ್ಕಳಿಗೆ ಭಾಗ್ಯಲಕ್ಷ್ಮಿ, ಸುಕನ್ಯ ಸಮೃದ್ಧಿ, ವಿಧವೆಗೆ ಪಿಂಚಣಿ ಮಂಜೂರು ಆದೇಶ ಪ್ರತಿ ವಿತರಿಸಿದ ಡಿಸಿ ಎಂಎಸ್ ದಿವಾಕರ





**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಕೇಂದ್ರ ಹೊಸಪೇಟೆಯಲ್ಲಿಯೇ ಜಿಲ್ಲಾಡಳಿತ ಕಾರ್ಯಾಲಯ ಇರುವುದರಿಂದ ನಿತ್ಯಾ ಹತ್ತಾರು ಅರ್ಜಿಗಳು ಬರುತ್ತವೆ. ಜನಸ್ಪಂದನಾ ಕಾರ್ಯಕ್ರಮದಲ್ಲಿ 48 ಅರ್ಜಿಗಳು ಸ್ವೀಕೃತವಾಗಿವೆ. ಕೆಲವುಗಳಿಗೆ ಸ್ಥಳದಲ್ಲಿಯೇ ಪರಿಹಾರ ಸೂಚಿಸಲಾಗಿದ್ದು, ಇನ್ನುಳಿದ ಅರ್ಜಿಗಳಿಗೆ ಕಾನೂನನ್ವಯ ಕ್ರಮಕೈಗೊಂಡು ಸೂಕ್ತ ಪರಿಹಾರ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಎಂ.ದಿವಾಕರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಹೊಸಪೇಟೆ ತಾಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಜನರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

ಹೊಸಪೇಟೆ ನಗರ ಸೇರಿದಂತೆ ಹೊಸಪೇಟೆ ಗ್ರಾಮೀಣ ಭಾಗದ ಜನರಿಂದ ಅಹವಾಲು ಸ್ವೀಕೃತಗೊಂಡಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸೂಪರ್‌ವೈಸರ್ ಜನಸ್ಪಂದನಾ ಕಾರ್ಯಕ್ರಮದಲ್ಲಿ ಗೈರಾಗಿದ್ದರಿಂದ ನೋಟೀಸ್ ನೀಡುವಂತೆ ಸಂಬಂಧಿಸಿದ ಅಧಿಕಾರಿಗೆ ಡಿಸಿ ಸೂಚಿಸಿದರು. ಗ್ರಾಮಮಟ್ಟದಲ್ಲೆ ಜನರ ಸಮಸ್ಯೆಗಳಿಗೆ ಪಿಡಿಒಗಳು ಸ್ಪಂದಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು ಅಧಿಕಾರಿಗಳಿಗೆ ಸೂಚಿಸಿದರು.

ಸಲ್ಲಿಕೆಯಾದ ಅರ್ಜಿಗಳ ಬಗ್ಗೆ ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳದಲ್ಲಿಯೇ 8 ಅರ್ಜಿಗಳನ್ನು ವಿಲೇಗೊಳಿಸಿದರು.

ನಗರಸಭೆ ಸಿಬ್ಬಂದಿ ಪೂರ್ವ ಸಿದ್ಧತೆ ಇಲ್ಲದೆ ಭಾಗವಹಿಸಿದ್ದರಿಂದ ಜನರ ಅಹವಾಲನ್ನು ಗಣಕೀಕರಣಗೊಳಿಸಿಕೊಳ್ಳದೇ, ತುಂಡು ಪೇಪರ್‌ನಲ್ಲಿ ಬರೆದುಕೊಂಡಿದ್ದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

**ನಿರಂತರ ಅಹವಾಲು ಸ್ವೀಕಾರ:** ಹೊಸಪೇಟೆ ನಗರದ ತಮ್ಮ ಕಚೇರಿಯಲ್ಲಿ ಪ್ರತಿನಿತ್ಯ ಸಾರ್ವಜನಿಕರ ಅಹವಾಲು ಆಲಿಸಿ ಅವರ ಅರ್ಜಿ ಮತ್ತು ಮನವಿಯ ಬಗ್ಗೆ ಸ್ಪಂದನೆ ನೀಡಲಾಗುತ್ತದೆ. ದೂರದ ತಾಲೂಕುಗಳಿಂದ ಸಾರ್ವಜನಿಕರು ಹೊಸಪೇಟೆಗೆ ಬಂದು ಅಹವಾಲು ಸಲ್ಲಿಸುವುದು ಕಡಿಮೆ. ಹೊಸಪೇಟೆ ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಹೊಸಪೇಟೆ ನಗರದಲ್ಲಿನ ಜಿಲ್ಲಾಡಳಿತ ಭವನವು ಹತ್ತಿರ ಇರುವು ಕಾರಣಕ್ಕೆ ಜಿಲ್ಲಾಧಿಕಾರಿಗಳ ಕಚೇರಿಗೆ ಬರುವ ಸ್ಥಳೀಯ ಸಾರ್ವಜನಿಕರಿಗೆ ಪ್ರತಿನಿತ್ಯ ಸ್ಪಂದನೆ ನೀಡಲಾಗುತ್ತದೆ ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸುದ್ದಿಗಾರರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷರಾದ ಎಚ್.ಎನ್.ಮೊಹಮ್ಮದ್ ಇಮಾಮ್ ನಿಯಾಜ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಸಹಾಯಕ ಆಯುಕ್ತರಾದ ಮಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಮ್ ಪಾಶಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್, ತಹಸೀಲ್ದಾರ ವಿಶ್ವಜೀತ್ ಮೆಹತಾ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿ ಹರೀಶ್, ಹೊಸಪೇಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧೂ ಯಲಿಗಾರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು ಇದ್ದರು. ಶಿಕ್ಷಕರಾದ ಬಸವರಾಜ ಅವರು ನಿರೂಪಿಸಿದರು.

### ಅರ್ಜಿಗಳ ವಿವರ

ಜನಸ್ಪಂದನ ಕಾರ್ಯಕ್ರಮದಲ್ಲಿ ಪೌರಾಡಳಿತ ಇಲಾಖೆಗೆ 17, ಕಂದಾಯ ಇಲಾಖೆಗೆ 11, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಗೆ 7, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 4, ಇಂಧನ ಇಲಾಖೆಗೆ ಮತ್ತು ಆರ್‌ಟಿಓ ಇಲಾಖೆಗೆ ತಲಾ 3, ಕೆಎಸ್‌ಆರ್‌ಟಿಸಿಗೆ 2 ಮತ್ತು ಪುರಸಭೆಗೆ 1 ಅರ್ಜಿ ಸೇರಿ ಒಟ್ಟು 48 ಅರ್ಜಿಗಳು ಸ್ವೀಕೃತಿಯಾದವು.

### ಸೌಲಭ್ಯಗಳ ವಿತರಣೆ:

ಜನಸ್ಪಂದನಾ ಕಾರ್ಯಕ್ರದಲ್ಲಿ ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆಯಡಿಯ ವಿವಿಧ ಫಲಾನುಭವಿಗಳಾದ ಟಿ.ರೇಣುಕಾ ದೇವಿ ಅವರಿಗೆ ನಿರ್ಗತಿಕ ವಿಧವಾ ವೇತನ, ಶರಣ ನಾಯ್ಕ ಅವರಿಗೆ ಇಂದಿರಾ ಗಾಂಧಿ ವೃದ್ದಾಪ್ಯ ವೇತನ, ರಾಮಾಂಜನೇಯ ಅವರಿಗೆ ವಿಕಲಚೇತನರ ವೇತನ ಮತ್ತು ಧರ್ಮನಾಯ್ಕ ಹಾಗೂ ಚಂದ್ರನಾಯ್ಕ ಅವರಿಗೆ ಸಂಧ್ಯಾ ಸುರಕ್ಷಾ ಯೋಜನೆಯ ಮಂಜೂರಾತಿ ಆದೇಶ ಪತ್ರಗಳನ್ನು ಜಿಲ್ಲಾಧಿಕಾರಿಗಳು ವಿತರಿಸಿದರು. ಇದೆ ವೇಳೆ ಮಕ್ಕಳಿಗೆ ಭಾಗ್ಯಲಕ್ಷ್ಮಿ ಹಾಗೂ ಸುಕನ್ಯ ಸಮೃದ್ಧಿ ಯೋಜನೆಯ ಪಾಸ್ ಪುಸ್ತಕಗಳನ್ನು ಸಹ ವಿತರಿಸಿದರು. ಜೊತೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗೆ ಆರೋಗ್ಯ ಕಿಟ್‌ಗಳನ್ನು ವಿತರಿಸಿದರು.

## ಮೈಕ್ರೋ ನ್ಯೂಸ್

### ಜುಲೈ 11ಕ್ಕೆ ಜಿಲ್ಲೆಯಲ್ಲಿ ಸಿಟ್ಟಿಂಗ್ಸ್ ನಿಗದಿ

**ಹಂಪಿ ಟೈಮ್ಸ್ ಹೊಸಪೇಟೆ**

ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಜುಲೈ 11 ರಂದು ವಿಜಯನಗರ ಜಿಲ್ಲೆ (ಹೊಸಪೇಟೆ)ಯಲ್ಲಿ ಸಿಟ್ಟಿಂಗ್ಸ್ ನಡೆಸಲು ಉದ್ದೇಶಿಸಿರುತ್ತದೆ.

ಈ ಸಂದರ್ಭದಲ್ಲಿ ವಿಜಯನಗರ (ಹೊಸಪೇಟೆ) ಜಿಲ್ಲೆಗೆ ಸಂಬಂಧಿಸಿದಂತೆ ಆಯೋಗದಲ್ಲಿ ನೋಂದಣಿಯಾಗಿರುವ ಪ್ರಕರಣ ಗಳನ್ನು ಇತ್ಯರ್ಥಪಡಿಸಿ, ವಿಲೇ ಮಾಡಲು ಕ್ರಮ ಜರುಗಿಸಲು ಉದ್ದೇಶಿಸಲಾಗಿದೆ. ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಗಳು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳ ಬೇಕೆಂದು ತಿಳಿಸಲಾಗಿದೆ.

ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಜಯನಗರ ಜಿಲ್ಲೆಯಲ್ಲಿನ ಸಾರ್ವಜನಿಕರಿಗೆ ಅನುಕೂಲ ವಾಗುವ ನಿಟ್ಟಿನಲ್ಲಿ ಜುಲೈ 11ರಂದು ಸಾರ್ವಜನಿಕರಿಂದ ದೂರುಗಳು/ಅಹವಾಲುಗಳನ್ನು ಸಹ ಸ್ವೀಕರಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕರು ಜುಲೈ 11ರಂದು ಆಯೋಗದ ಹಂಗಾಮಿ ಅಧ್ಯಕ್ಷರು ಹಾಗೂ ಸದಸ್ಯ ರನ್ನು ಸಂಪರ್ಕಿಸಿ ದೂರುಗಳನ್ನು ಸಲ್ಲಿಸಬಹುದು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಎ ದಿನೇಶ್ ಸಂಪತ್‌ರಾಜ್ ತಿಳಿಸಿದ್ದಾರೆ.

## ವಾರ್ತಾ ಇಲಾಖೆಯ ಆಯುಕ್ತರಾಗಿ ಹೇಮಂತ್ ನಿಂಬಾಳ್ಕರ್ ಅಧಿಕಾರ ಸ್ವೀಕಾರ



**ಹಂಪಿ ಟೈಮ್ಸ್ ಹೊಸಪೇಟೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ಹಿರಿಯ ಐಪಿಎಸ್ ಅಧಿಕಾರಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಮಂಗಳವಾರ ಅಧಿಕಾರ ಸ್ವೀಕರಿಸಿದರು. ನಿರ್ಗಮಿತ ಆಯುಕ್ತರಾದ ಸುರಳ್ಕರ್ ವಿಕಾಸ ಕಿಶೋರ್ ಅವರು ಅಧಿಕಾರ ಹಸ್ತಾಂತರಿಸಿದರು. ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮುನ್ನ ಹೇಮಂತ್ ನಿಂಬಾಳ್ಕರ್ ಅವರು ವಾರ್ತಾ ಇಲಾಖೆಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದರು.

## ಇನ್ಮುಂದೆ ಶಾಲಾವಧಿಯಲ್ಲಿ ಮೊಬೈಲ್ ಬಳಕೆಗೆ ಬ್ರೇಕ್

**ಹಂಪಿ ಟೈಮ್ಸ್ ಹೊಸಪೇಟೆ :**

ಶಾಲಾ ಆರಂಭದಿಂದ ಮುಕ್ತಾಯದವರೆಗೆ ಶಿಕ್ಷಕರು ತಮ್ಮ ಮೊಬೈಲ್‌ಗಳನ್ನು ಮುಖ್ಯಶಿಕ್ಷಕರಿಗೆ ನೀಡಬೇಕು. ಮೊಬೈಲ್ ಬಳಕೆ ಕಂಡುಬಂದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಬಿಇಒ ಎಂ.ಚನ್ನಬಸಪ್ಪ ತಿಳಿಸಿದ್ದಾರೆ. ಬೋಧನಾವಧಿಯಲ್ಲಿ ಮೊಬಲ್ ಬಳಕೆ ನಿಷೇಧಿಸಲಾಗಿದೆ. ಭೋಜನಾ ವಿರಾಮದಲ್ಲಿ ಬಳಸಬಹುದಾಗಿದೆ. ತುರ್ತು ಕರೆಗೆ ಶಾಲಾ ಮುಖ್ಯಗುರುಗಳ ನಂಬರನ್ನು ನೀಡಬೇಕು. ಆದೇಶ ನಿರ್ಲಕ್ಷಿಸಿದರೆ ಮುಖ್ಯಶಿಕ್ಷಕರನ್ನೆ ಹೊಣೆಗಾರರನ್ನಾಗಿ ಮಾಡಿ ಶಿಸ್ತುಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದಾರೆ.






## ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಆಯ್ಕೆ ಸಮಿತಿ ರಚನೆ: ಪ್ರಶಸ್ತಿಗೆ ನಾಮ ನಿರ್ದೇಶನಗಳ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2019ನೇ ಕ್ಯಾಲೆಂಡರ್ ವರ್ಷದಿಂದ 2023ನೇ ಕ್ಯಾಲೆಂಡರ್ ವರ್ಷಗಳಿಗೆ ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಆಯ್ಕೆ ಸಮಿತಿ ರಚಿಸಲಾಗಿದ್ದು, ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಆಯ್ಕೆ ಸಮಿತಿ: ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಪಿ.ಎನ್.ದೇಸಾಯಿ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಹಿರಿಯ ಪತ್ರಕರ್ತರಾದ ಡಾ.ಈಶ್ವರ ದೈತೋಟ, ಶಾಂತಲಾ ಧರ್ಮರಾಜ್ ಹಾಗೂ ಎಂ.ಎಸ್.ಮಣಿ ಸದಸ್ಯರಾಗಿದ್ದಾರೆ.

ಟಿಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ: ಕನ್ನಡದ ಹಿರಿಯ ಪರ್ತಕರ್ತ ಟಿ.ಎಸ್. ರಾಮಚಂದ್ರರಾವ್ ಅವರ ನೆನಪಿನಲ್ಲಿ ಸರ್ಕಾರ ಟಿಯೆಸ್ಸಾರ್ ನಿಡುತ್ತಾ ಬಂದಿದೆ. ಪ್ರಶಸ್ತಿಯ ಮೊತ್ತ 2 ಲಕ್ಷ ರೂ ಆಗಿದ್ದು, ಕನ್ನಡ ಪತ್ರಿಕೋದ್ಯಮ, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ಅಥವಾ ಎರಡರಲ್ಲೂ ಒಟ್ಟಿಗೆ ಕನಿಷ್ಠ 30 ವರ್ಷಗಳ ಸೇವೆ ಸಲ್ಲಿಸಿರಬೇಕು. ಜೊತೆಗೆ ಕನ್ನಡ ಕ್ಷೇತ್ರಕ್ಕೆ ಭಾಷೆಯ ಬೆಳವಣಿಗೆಗೆ ಕೊಡುಗೆ ನೀಡಿರುವವರನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಒಬ್ಬರಿಗೆ ಮಾತ್ರ ಈ ಪ್ರಶಸ್ತಿಯನ್ನು ನೀಡಲಾಗುವುದು.

ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ: ಪತ್ರಿಕಾ ರಂಗದ ಭೀಷ್ಮರೆಂದೇ ಹೆಸರಾದ ಮೊಹರೆ ಹಣಮಂತರಾಯ ಅವರ ನೆನಪಿನಲ್ಲಿ ಸರ್ಕಾರವು ಪ್ರಶಸ್ತಿ ನೀಡುತ್ತಾ ಬಂದಿದೆ. ಪ್ರಶಸ್ತಿಯ ಮೊತ್ತವು 2 ಲಕ್ಷ ರೂ ಆಗಿದ್ದು, ಕನ್ನಡದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಯಾವುದೇ ಪತ್ರಿಕೆಯನ್ನು ಅಥವಾ ವೃತ್ತಿಯಲ್ಲಿ ಪತ್ರಿಕಾಲಯದ ಮಾಲೀಕರು, ಆಡಳಿತಗಾರರಾಗಿ ಕನಿಷ್ಠ 30 ವರ್ಷ ಸೇವೆ ಸಲ್ಲಿಸಿರಬೇಕು. ಪ್ರಶಸ್ತಿಗಳಿಗೆ ನಾಮನಿರ್ದೇಶನಗಳನ್ನು, ಮಾಧ್ಯಮ ಸಂಸ್ಥೆಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳು ಪೂರ್ಣ ದಾಖಲೆಗಳೊಂದಿಗೆ ಆಯುಕ್ತರು, ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾಸೌಧ, ನಂ. 17, ಭಗವಾನ್ ಮಹಾವೀರರಸ್ತೆ, ಬೆಂಗಳೂರು–560 001 ಇಲ್ಲಿಗೆ 2024ನೇ ಜುಲೈ 25ರ ಸಂಜೆ 5.30 ಗಂಟೆ ಒಳಗಾಗಿ ಕಳುಹಿಸಿಕೊಡಬಹುದಾಗಿದೆ. ಅಥವಾ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿ ಮೂಲಕ ಇಲ್ಲವೇ tsraward@gmail.com ಇಮೇಲ್ ವಿಳಾಸಕ್ಕೆ ಕೊನೆಯ ದಿನಾಂಕದೊಳಗೆ ಕಳುಹಿಸಿಕೊಡಬಹುದು.




## ವಿಜ್ಞಾನ

# ಮಲಗುವ ಮೊದಲು ನಾಯಿಗಳೇಕೆ ಸುತ್ತು ಹಾಕುತ್ತವೆ?

■ ಆರ್.ಬಿ.ಗುರುಬಸವರಾಜ

ಮನೆಯ ಜಗಲಿ ಮೇಲೆ ಕುಳಿತಿದ್ದ ಪ್ರವೀಣ ಮನೆಯ ಎದುರಿಗೆ ನಾಯಿಯೊಂದು ಮಲಗಲು ಸಿದ್ದವಾದ ನಾಯಿಯೊಂದನ್ನು ನೋಡಿದ. ಅದು ಮಲಗುವ ಮುನ್ನ ನಾಲ್ಕಾರು ಬಾರಿ ಸುತ್ತು ಹಾಕಿ ಮಲಗಿತು. ಇದು ಪ್ರವೀಣನಲ್ಲಿ ಕತೂಹ ಮೂಡಿಸಿತು. ಪಕ್ಕದಲ್ಲಿದ್ದ ತಾಯಿಗೆ "ಅಮ್ಮ ನಾಯಿ ಏಕೆ ಮಲಗುವ ಮುನ್ನ ಸುತ್ತು ಹಾಕುತ್ತದೆ?" ಎಂದ. ಅವನ ಪ್ರಶ್ನೆಗೆ ಅಚ್ಚರಿಗೊಂಡರೂ ನಿಧಾನವಾಗಿ ಉತ್ತರಿಸತೊಡಗಿದಳು.

ನಾಯಿಗಳು ಮಲಗುವ ಮೊದಲು ಹಲವಾರು ಬಾರಿ ತಿರುಗುವುದು ಸಹಜ ನಡವಳಿಕೆಯಾಗಿದ್ದು ಅದು ಅವರ ಕಾಡು ಪೂರ್ವಜರಿಂದ ಆನುವಂಶಿಕವಾಗಿ ಬಂದಿದೆ. ಮಲಗುವ ಮೊದಲು ತಾವು ವಿಶ್ರಾಂತಿ ಪಡೆಯುವ ಸ್ಥಳ ಆರಾಮದಾಯಕ ಹಾಗೂ ಸುರಕ್ಷಿತವಾಗಿರಬೇಕೆಂದು ಬಯಸುತ್ತವೆ. ಸುತ್ತು ಹಾಕುವ ಮೂಲಕ ಅಸಮ ನೆಲವನ್ನು ಸಮತಟ್ಟಾಗಿ ಮತ್ತು ಆರಾಮದಾಯವನ್ನಾಗಿಸಿಕೊಳ್ಳುತ್ತವೆ. ಮಲಗುವ ಜಾಗದಲ್ಲಿ ಪರಭಕ್ಷಕಗಳು, ಕೀಟಗಳು, ಸರೀಸೃಪಗಳು ಅಥವಾ ಯಾವುದೇ ಸಂಭಾವ್ಯ ಅಪಾಯಗಳನ್ನು ಪರಿಶೀಲಿಸಿಕೊಂಡು ಸುರಕ್ಷಿತವಾಗಿದೆ ಎಂದು ಖಚಿತಪಡಿಸಿಕೊಂಡು ಮಲಗುತ್ತವೆ.



ನಾಯಿಗಳು ಮಲಗುವ ಮುಂಚೆ ಸ್ಥಳದಲ್ಲಿನ ಉಷ್ಣತೆಯ ಮಟ್ಟವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತವೆ. ಮೇಲ್ಮಣ್ಣಿನ ಉಷ್ಣತೆಯು ಹೆಚ್ಚಾಗಿದ್ದರೆ ಅದನ್ನು ಕಾಲಿನಿಂದ ದೂರತಳ್ಳಿ ನೆಲದ ಮಣ್ಣಿನ ಉಷ್ಣತೆ ಕಡಿಮೆ ಮಾಡಿಕೊಂಡು ಮಲಗುತ್ತವೆ. ಇದು ತಮ್ಮ ದೇಹದ ಉಷ್ಣತೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಹಕಾರಿ.

ನಾಯಿಗಳು ತಮ್ಮ ಪಂಜಗಳಲ್ಲಿನ ಗ್ರಂಥಿಗಳಿಂದ 'ಫೆರೋಮೋನ್' ಎಂಬ ರಸಾಯನಿಕ ದ್ರವ್ಯವನ್ನು ಬಿಡುಗಡೆ ಮಾಡುತ್ತವೆ. ಇದು ವಿಭಿನ್ನ ಪರಿಮಳ ಹೊಂದಿರುತ್ತದೆ. ಪರಿಮಳದಿಂದ ಪ್ರದೇಶವನ್ನು ನಂತರದಲ್ಲಿ ಸುಲಭವಾಗಿ ಗುರುತಿಸಿಕೊಳ್ಳುತ್ತವೆ. ಅಲ್ಲದೇ ನಾಯಿಗಳು ನೆಲದ ಮೇಲೆ ಸುತ್ತು ಹಾಕುವ ಮೂಲಕ ತಮ್ಮಲ್ಲಿ ಅಡಕವಾಗಿರುವ ಶಕ್ತಿ ಅಥವಾ ಹತಾಶೆಯನ್ನು ಕಡಿಮೆ ಮಾಡಿಕೊಳ್ಳುತ್ತವೆ.

ಒಟ್ಟಾರೆಯಾಗಿ ನಾಯಿಗಳ ಸುತ್ತುವ ನಡವಳಿಕೆಯು ನೈಸರ್ಗಿಕ ಮತ್ತು ಸಹಜ ನಡವಳಿಕೆಯಾಗಿದ್ದು, ಇದು ಸೌಕರ್ಯ, ಸುರಕ್ಷತೆ ಮತ್ತು ಸಂವಹನಕ್ಕೆ ಸಂಬಂಧಿಸಿದ ಉದ್ದೇಶಗಳನ್ನು ಪೂರೈಸುತ್ತದೆ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬದಲಾವಣೆ ನಿಸರ್ಗದ ನಿಯಮ



ಟೇಬಲ್ ಮೇಲೆ ಇದ್ದ ತನ್ನ ಪುಸ್ತಕವನ್ನು ತೆಗೆದುಕೊಳ್ಳಲು ಬಂದ ಸಾನ್ವಿಯನ್ನು ಕಂಡು "ಅಯ್ಯೋ, ಈ ಹುಡುಗೀನ ಒಂದ್ಕಡೆ ಕೂರಿಸಬಾರದ.... ಮಗುವಿಗಂತೂ ಬುದ್ಧಿ ಇಲ್ಲ ತಾಯಿಗೂ ಇಲ್ವಾ? ಮಡಿ ಮೈಲಿಗೆ ಅರಿವೇ ಇಲ್ಲ ಇವರಿಬ್ಬರಿಗೂ" ಎಂದು ಒಂದೇ ಸಮನೆ ಬೇಸರದಿಂದ ಕಮಲಮ್ಮ ವಟಗುಟ್ಟುತ್ತಿದ್ದರು.

"ಸುಮ್ನಿರಬಾರ್ದ ಕಮಲು... ಅದಿನ್ನೂ ಪುಟ್ಟ ಮಗು. ದೊಡ್ಡೋಳಾದ್ ಮಾತ್ರಕ್ಕೆ ಅವಳಿಗೆಲ್ಲಾ ಗೊತ್ತಿರಬೇಕು ಅಂತ ಇಲ್ಲ. ಅಷ್ಟಕ್ಕೂ ನಿನಗೆ ಅವಳು ನಿನಗೆ ಬೇಕಾದ ಹಾಗೆ ಇರಬೇಕು ಅಂತ ಅನಿಸಿದ್ರೆ ನಿಧಾನವಾಗಿ ಕೂಡಿಸಿ ಎಲ್ಲಾ ವಿಷಯವನ್ನು ಅವಳಿಗೆ ಸಮಾಧಾನದಿಂದ ಹೇಳು.. ಸುಮ್ನೆ ಅವರಮ್ಮನನ್ನ ಯಾಕೆ ಅಂತೀಯಾ? ಪಾಪ ಅವಳೂ ಎಷ್ಟು ಅಂತ ಒಳಗೆ ಹೊರಗೆ ಒಬ್ಬಳೇ ಮಾಡ್ತಾಳೆ. ಅಷ್ಟಕ್ಕೂ ಅವಳ ಮಾತನ್ನು ಪುಟ್ಟಿ ಎಲ್ ಕೇಳ್ತಾಳೆ?" ಎಂದು ಪತ್ನಿ ಕಮಲಮ್ಮನವರನ್ನು ಗೋವಿಂದಪ್ಪನವರು ಸಮಾಧಾನಿಸಿದರು.

ಅಡುಗೆ ಮನೆಯಲ್ಲಿ ಅತ್ತೆ ಮಾವನಿಗೆ ಸಾಯಂಕಾಲದ ಚಹಾ ಮಾಡುತ್ತಿದ್ದ ಪ್ರಿಯಾಳ ಮುಖದಲ್ಲಿ ವಿಷಾದದ ನಗೆ ಮೂಡಿ ಮರೆಯಾಯಿತು. ಕುದಿಯುತ್ತಿರುವ ಚಹಾದ ಎಸರನ್ನು ನೋಡುತ್ತಾ ಆಕೆಯ ಮನ ಕೆಲವರ್ಷಗಳ ಹಿಂದೆ ಓಡಿತು.

ತಾನಾಗ 9ನೇ ತರಗತಿಯಲ್ಲಿ ಓದುತ್ತಿದ್ದಳು. ಮಧ್ಯವಾರ್ಷಿಕ ಪರೀಕ್ಷೆಗಳು. ಇನ್ನೇನು ನಾಳೆಯ ದಿನ ಕೊನೆಯ ಪರೀಕ್ಷೆ ಎನ್ನುವಾಗ ತನ್ನ ಮೊದಲ ಋತುಚಕ್ರ ಪ್ರಾರಂಭವಾಗಿತ್ತು. ಕೂಡಲೇ ಅಮ್ಮ ಸುತ್ತಣ ಮನೆಯ ಮುತ್ತೈದೆ ಹೆಂಗಸರನ್ನು ಕರೆದು, ಅವರೆಲ್ಲರೂ ಸೇರಿ ತನ್ನನ್ನು ಮುಟ್ಟಿಸಿಕೊಳ್ಳದೆ ಮೇಲಿನಿಂದಲೇ ತಲೆಗೆ ಎಣ್ಣೆ ಹಾಕಿ, ಹಣೆಗೆ ಕುಂಕುಮ ಅರಿಶಿಣ ಹಚ್ಚಿಕೊಳ್ಳಲು ತಾನು ಚಾಚಿದ ಕೈಗೆ ದೂರದಿಂದಲೇ ಹಾಕಿದರು. ನಂತರ ಕೂಡ ತನ್ನನ್ನು ಮುಟ್ಟಿಸಿಕೊಳ್ಳದೆ ದೂರದಿಂದಲೇ ತಲೆಗೆ ನೀರು ಎರೆದರು. ಇದು ಐದು ದಿನಗಳ ಕಾಲ ನಿರಂತರ ನಡೆದು 5ನೇ ದಿನ ಮತ್ತೊಮ್ಮೆ ತಲೆಗೆ ನೀರೆರೆದು ಸ್ನಾನ ಮಾಡಿಸಿ ಹೊಸ ರೇಶಿಮೆ ಸೀರೆ ಉಡಿಸಿ ಅಲಂಕಾರ ಮಾಡಿ ಕೆನ್ನೆಗೆ ಕಪ್ಪಿಟ್ಟು ಪಕ್ಕದಲ್ಲಿ ಒಂದು ಪುಟ್ಟ ಕಟ್ಟಿಗೆಯ ಗೊಂಬೆಯನ್ನು ಕೂರಿಸಿ ಅರಿಶಿಣ ಕುಂಕುಮ ಹಚ್ಚಿ ಆರತಿ ಮಾಡಿ ಎಲ್ಲರಿಗೂ ಊಟ ಹಾಕಿಸಿ ಸಂಭ್ರಮದ ಸಮಾರಂಭ ಮಾಡಿದರು. ತನಗೋ ವಿಪರೀತ ಸಂಕೋಚ. ಮನೆಯಲ್ಲಿ ಏನನ್ನೂ ಮುಟ್ಟದೆ ಮನೆಯ ಒಂದು ಮೂಲೆಯಲ್ಲಿ ಕುಳಿತು ಅಮ್ಮ ಕೊಡುವ ಬಿಸಿಬಿಸಿಯಾದ ಊಟ ತಿಂಡಿ ಸೇವಿಸುತ್ತಾ ಧಾರಾಳವಾಗಿ ಗೋಡಂಬಿ ದ್ರಾಕ್ಷಿ ಗೇರುಬೀಜ ಬಾದಾಮಿ ಉತ್ತತ್ತಿ ಆಳವಿ ಅಂಟು ತುಪ್ಪ ಬೆಲ್ಲ ಕೊಬ್ಬರಿ ಹಾಕಿ ಮಾಡಿದ ಅಂಟಿನ ಉಂಡೆಯನ್ನು ತಿನ್ನಲು ಕೊಡುತ್ತಿದ್ದರು. ಅಪ್ಪ ಅಣ್ಣ ಕೂಡ ನನ್ನೊಂದಿಗೆ ಮಾತನಾಡದೆ ದೂರ ದೂರವೇ ಓಡಾಡಿದಾಗ ಮನಸ್ಸು ಮುದುಡುತ್ತಿತ್ತು.

ಮುಂದೆ ರಜೆ ಮುಗಿದು ಶಾಲೆಗೆ ಹೋದಾಗ ಸಮಾಜವಿಜ್ಞಾನ ಪತ್ರಿಕೆಯ ಅಂಕಗಳನ್ನು ಎಲ್ಲರಿಗೂ ಹೇಳಿ ನಾನು ಅಟೆಂಡ್ ಆಗದೆ ಇದ್ದುದನ್ನು ನಾಗೇಶ್ ಸರ್ ಪ್ರಶ್ನಿಸಿದಾಗ ತಾನು ಸಂಕೋಚದಿಂದ ತಲೆ ತಗ್ಗಿಸಿ ನಿಂತರೆ ಸ್ನೇಹಿತರೆಲ್ಲ ಮುಸಿ ಮುಸಿ ನಗುತ್ತಿದ್ದುದನ್ನು ಕಂಡು ಎಲ್ಲಾದರೂ ಓಡಿ ಹೋಗಿ ಬಚ್ಚಿಟ್ಟುಕೊಳ್ಳುವಂತಾಗಿತ್ತು. ಕೈಗೆ ಚಹಾದ ಎಸರಿನ ಬಿಸಿನೀರ ಹನಿ ಸಿಡಿದಾಗ ಎಚ್ಚೆತ್ತ ಪ್ರಿಯಾ ತನ್ನ ಬಾಲ್ಯದ ಆ ದಿನಗಳನ್ನು ನೆನೆದು ಮುಗುಳ್ನಗುತ್ತಾ ಚಹಕ್ಕೆ ಹಾಲು ಹಾಕಿ ಕುದಿಸಿ ಸೋಸಿ ತಂದು ಮನೆಯ ಎಲ್ಲರಿಗೂ ಒಂದೊಂದು ಕಪ್ ಕೊಟ್ಟು ತಾನು ಕೂಡ ಒಂದು ಕಪ್ ಹಿಡಿದು ಡೈನಿಂಗ್ ಟೇಬಲ್ ಬಳಿ ಕುಳಿತಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಆಗ ತಾನೆ ಆಫೀಸಿನಿಂದ ಬಂದು ಕೈಕಾಲು ಮುಖ ತೊಳೆದ ಪ್ರಿಯಾಳ ಗಂಡ ಸತೀಶ್ ಹೆಂಡತಿಯಿಂದ ಕಪ್ಪನ್ನು ಪಡೆದು ಮನೆಯ ಬಿಗು ವಾತಾವರಣವನ್ನು ಕಂಡು ಕಣ್ಸನ್ನೆಯಲ್ಲಿಯೇ ಪತ್ನಿಗೆ ಏನಾಯಿತು ಎಂದು ಕೇಳಿದ. ಅಲ್ಲಿಯೇ ಹೋಂವರ್ಕ್ ಮಾಡುತ್ತಾ ಕುಳಿತಿದ್ದ ಮಗ ಸೂರಜ್ ಗೆ ಕೇಳಿಸದಂತೆ ಪ್ರಿಯಾ ಗಂಡನ ಕಿವಿಯಲ್ಲಿ ಮಗಳು ದೊಡ್ಡವಳಾದ ಸುದ್ದಿಯನ್ನು ಅರುಹಿದಳು.

ಕೇವಲ ಹನ್ನೊಂದರ ಹರೆಯದ ಪುಟ್ಟ ಮಗಳು ಋತುಮತಿಯಾದ ಸುದ್ದಿ ಯನ್ನು ಕೇಳಿ ಸತೀಶ ತುಸು ಸಂಭ್ರಮ ಮತ್ತು ಕೊಂಚ ಗಾಬರಿಯಿಂದ ಮುಂದೇನು ಎಂಬಂತೆ ಪತ್ನಿಯತ್ತ ನೋಡಿದ. ಕಮಲಮ್ಮನವರು "ಸತೀಶ ಐದು ದಿನ ನಿನ್ನ ಮಗಳ್ನ ಒಂದ್ ಕಡೆ ಕೂತ್ಕೊಳಕ್ಕೆ ಹೇಳು, ಹಾಗೆ ನಿನ್ ಹೆಂಡ್ತಿಗ್ ಹೇಳು ಆಕೆಗೆ ಚಂದಾಗಿ ಗೋಡಂಬಿ, ದ್ರಾಕ್ಷಿ, ಕೇರಬೀಜ, ಬಾದಾಮಿ, ಉತ್ತತ್ತಿ , ತುಪ್ಪ ಅಂಟು, ಆಳವಿ ಹಾಕಿದ ಕೊಬ್ಬರಿ ಬೆಲ್ಲದ ಉಂಡಿ ಕೊಡಲಿ 5ನೇ ದಿನ ತಲೆಗೆ ನೀರೆರೆದು ಬಳೆ ಹಾಕಿ ಜಂಗಮರನ್ನ ಕರೆಸಿ ಪಾದೋದಕ ಪ್ರಸಾದ ಮಾಡಬೇಕು ಎಂದು ಜೋರಾಗಿ ಹೇಳಿದರು.

ಇದೆಲ್ಲಾ ಮಗಳಿಗೆಲ್ಲಿ ಮುಜುಗರ ತರುತ್ತದೆ ಎಂಬ ಭಾವದಿಂದ ಸತೀಶ ಅಯ್ಯೋ!ಅಮ್ಮ ಅದ್ಯಾವ ಓಬಿರಾಯನ ಕಾಲದ ಮಾತು ಅಂತ ಹೇಳ್ತೀಯಾ" ಎಂದು ತುಸು ದಿಗಿಲಿನಿಂದ ಜೋರಾಗಿ ಹೇಳಿದಾಗ... ಅಲ್ಲಿಯೇ ಕುಳಿತಿದ್ದ ಮಗ ಸೂರಜ್. ಕೂಲ್ ಡ್ಯಾಡ್.... ಗಾಬರಿಯಾಗೋ ಅಥವಾ ಆತಂಕ ಪಡುವ ಅವಶ್ಯಕತೆ ಇಲ್ಲ.. ಅಜ್ಜಿ,ಅಮ್ಮ ತಮಗೆ ತಿಳಿದ ಹಾಗೆ ಅವರ ಮನಸ್ಸಿನ ಸಮಾಧಾನಕ್ಕೆ ಶಾಸ್ತ್ರಗಳನ್ನು ಮಾಡಲಿ. ಸೈಂಟಿಫಿಕ್ ಆಗಿ ಅದು ಒಳ್ಳೆಯದು ಎಂದು ಹೇಳಿ ಅಜ್ಜಿಯ ಬಳಿ ಸಾರಿದ. ಗಂಡು ಹುಡುಗ ಈ ರೀತಿ ಮಾತನಾಡಿದ್ದನ್ನು ನೋಡಿ ತುಸು ಅಚ್ಚರಿಯಿಂದ ಬಳಿ ಬಂದು ಕುಳಿತ ಮೊಮ್ಮಗನನ್ನು "ಏನೋ, ನಿನಗೇನು ಗೊತ್ತು" ಎಂದು ಅಜ್ಜಿ ಕೇಳಿದರು.

"ಡೋಂಟ್ ವರಿ ಅಜ್ಜಿ, ನಮ್ಮ ಪಠ್ಯದಲ್ಲಿ ಈ ಕುರಿತು ಎಲ್ಲಾ ವಿವರಣೆ ಕೊಟ್ಟಿದ್ದಾರೆ. ಹಾಲು ಹಲ್ಲು ಉದುರಿ ಹೊಸ ಹಲ್ಲು ಬರುವ ಈ ಸಮಯದಲ್ಲಿ ಹೆಣ್ಣು ಮಕ್ಕಳ ಪಿರಿಯಡ್ಸ್ ಅಂದ್ರೆ ಋತುಚಕ್ರ ಪ್ರಾರಂಭವಾದರೆ ಅದಕ್ಕೆ ಪ್ಯೂಬರ್ಟಿ ಅಂತ ಹೇಳ್ತಾರೆ. ಇವತ್ತಿನ ಅತಿಯಾದ ಜಿಡ್ಡಿನ ಮತ್ತು ಪೌಷ್ಟಿಕ ಪದಾರ್ಥಗಳು, ನಾವು ನೋಡುವ, ಕೇಳುವ ಚಿತ್ರಗಳ ದೃಶ್ಯಗಳು ನಮ್ಮ ಹಾರ್ಮೋನುಗಳ ಮೇಲೆ ಬೀರುವ ಪರಿಣಾಮದಿಂದ ಈಗಿನ ಹೆಣ್ಣು ಮಕ್ಕಳು ತುಸು ಬೇಗನೆ ದೊಡ್ಡವರಾಗುತ್ತಾರೆ. ಇದು ಮೈಲಿಗೆ ಅಲ್ವೇ ಅಲ್ಲ ಅಜ್ಜಿ. ಈ ಸಮಯದಲ್ಲಿ ಹೊಸದೊಂದು ಅನುಭವಕ್ಕೆ ತೆರೆದುಕೊಳ್ಳುವ ಆಕೆಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕೊಂಚ ವಿಶ್ರಾಂತಿ ಬೇಕೇ ಬೇಕು. ಅದಕ್ಕೆ ಶಾಸ್ತ್ರ ಸಂಪ್ರದಾಯದ ಹೆಸರಿನಲ್ಲಿ ಆಕೆಯನ್ನು ಹೈಜಿನಿಕ್ ಆಗಿ ಮೈನ್ಟೈನ್ ಮಾಡ್ತಾರೆ. ಪ್ರತಿ ತಿಂಗಳು ಪೀರಿಯಡ್ಸ್ ಆದಾಗ ಹೆಚ್ಚು ಬ್ಲೀಡಿಂಗ್ ಆಗೋದ್ರಿಂದ ರಕ್ತಹೀನತೆ ಆಗದೆ ಇರಲಿ ಅಂತ ಆಕೆ ದೈಹಿಕವಾಗಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪೌಷ್ಟಿಕವಾದ ಸಿಹಿ ಪದಾರ್ಥಗಳು, ಅಡುಗೆ ತಿಂಡಿಗಳನ್ನ ಮಾಡಿ ಹಾಕ್ತಾರೆ ಎಂದು ಹೇಳಿದಾಗ ಇದುವರೆಗೂ ಇದು ಹೆಣ್ಣು ಮಕ್ಕಳ ವಿಚಾರ ಎಂದು ಸಂಕೋಚದಿಂದ ಮಾತನಾಡದೆ ಉಳಿದಿದ್ದ ಗೋವಿಂದಪ್ಪ ಮತ್ತು ಸತೀಶ ಅಚ್ಚರಿಯಿಂದ ಸೂರಜನತ್ತ ನೋಡಿದರು.

"ಹಾಗಾದ್ರೆ...ಆಕೆಯನ್ನು ಮೂಲೆಯಲ್ಲಿ ಕೂಡ್ಸೋದು ಬೇಡ್ವಾ" ಎಂದು ಕಮಲಮ್ಮ ತುಸು ಅಸಹನೆಯಿಂದ ಕೇಳಿದಾಗ...ಉಹೂಂ ಬೇಡ ಅಜ್ಜಿ. ಅವಳು ನಮ್ಮ ಹಾಗೆ ಎಲ್ಲರ ಜೊತೆ ಓಡಾಡಿಕೊಂಡಿರಲಿ. ನಿಮ್ಮದೇನೇ ಶಾಸ್ತ್ರ ಸಂಪ್ರದಾಯ ಇದ್ರೂ ಅದನ್ನ ಮನೆಮಟ್ಟಿಗೆ ಮಾಡಿ. ನಾನೇನು ಆಕೆಗೆ ಕೀಟಲೆ ಮಾಡಿ ಹೊಡೆದಾಡೋದು ಮಾಡಲ್ಲ ಎಂದು ಹೇಳಿದವನೆ ತಂಗಿಯತ್ತ ತಿರುಗಿದ. ಸಾನು... ನಿಂಗೆ ಏನಾದರೂ ಹೊಟ್ಟೆ ನೋವು, ಸೊಂಟ ನೋವು ಬಂದ್ರೆ ಹೇಳು.... ಬಿಸಿ ನೀರು ಕಾಯಿಸಿ ಹಾಟ್ ಬ್ಯಾಗ್ ಗೆ ಹಾಕ್ಕೊಡ್ತೀನಿ ಹೊಟ್ಟೆ ಮೇಲೆ ಇಟ್ಕೊಂಡ್ರೆ... ಯು ವಿಲ್ ಫೀಲ್ ಬೆಟರ್ ಎಂದು ಹೇಳಿ ತನ್ನಮ್ಮ ಪ್ರಿಯಾಳತ್ತ ತಿರುಗಿ ಆದರೆ ಅಮ್ಮ... ಅವಳಿಗೆ ಕೊಡೋ ಅಂಟಿನ ಉಂಡಿಯಲ್ಲಿ ನನಗೂ ಪಾಲು ಬೇಕು ಎಂದು ಮೂತಿಯುಬ್ಬಿಸಿ ಹೇಳಿದಾಗ ಎಲ್ಲರೂ ಜೋರಾಗಿ ನಕ್ಕರೆ, ತನ್ನ ಪರವಾಗಿ ಅಣ್ಣನಾಡಿದ ಮಾತು ಕೇಳಿ ಪುಟ್ಟ ಸಾನ್ವಿಯ ಮುಖ ಅರಳಿತು.

ತಾನು ಅನುಭವಿಸಿದ ಕೆಲವು ಮುಜುಗರಗಳನ್ನು ನೆನೆದು ಅತ್ತೆಯ ಮನಃಸ್ಥಿತಿಯನ್ನು ಬದಲಿಸಲು ಏನೆಲ್ಲಾ ಹರಸಾಹಸ ಮಾಡಬೇಕು ಎಂದು ಚಿಂತಿಸುತ್ತಿದ್ದ ಪ್ರಿಯ ನಿರಾಳವಾದ ಭಾವದಿಂದ ಮನದುಂಬಿ ನಕ್ಕಳು. ಇತ್ತ ಗೋವಿಂದಪ್ಪ ಮತ್ತು ಸತೀಶರ ಮನದಲ್ಲಿ ಅಯ್ಯೋ ಇಷ್ಟು ವರ್ಷಗಳ ಕಾಲ ಋತು ಚಕ್ರವನ್ನು ಅಸ್ಪೃಶ್ಯತೆ, ಮೈಲಿಗೆ ಎಂಬಂತೆ ಈ ವಿಷಯದ ಕುರಿತು ಅರಿಯಲು, ಹೆಣ್ಣು ಮಕ್ಕಳ ಆ ದಿನಗಳ ದೈಹಿಕ ನೋವು ಸಂಕಟವನ್ನು, ಮನದ ತಳಮಳವನ್ನು ಅರಿಯದೆ ಹೋದೆವು, ಪುಟ್ಟ ಹುಡುಗ ಸೂರಜ್ ಇದೆಲ್ಲದರ ಕುರಿತು ಅರಿತಿದ್ದಲ್ಲದೇ ಅಜ್ಜಿ ಮತ್ತು ತಾಯಿಗೆ ಅದೆಷ್ಟು ಚೆನ್ನಾಗಿ ಅರ್ಥ ಮಾಡಿಸಿದ ಎಂದು ಮನದಲ್ಲಿಯೇ ಅಚ್ಚರಿಪಟ್ಟು ಒಬ್ಬರು ಇನ್ನೊಬ್ಬರ ಮುಖ ನೋಡಿ ನಸುನಕ್ಕರು. ಅಜ್ಜಿ ಕಮಲಮ್ಮ ಹೌದಲ್ವೆ... ನಮ್ಮ ಕಾಲದಲ್ಲಿ ಮನೆ ಕೆಲಸ ಎಲ್ಲ ಮಾಡ್ತಾ ಇದ್ವಿ, ಈ ಸಮಯದಲ್ಲಿ ದೈಹಿಕ ಶ್ರಮದ ಕೆಲಸಗಳ್ನ ಮಾಡೋದು ಅಷ್ಟು ಒಳ್ಳೆಯದಲ್ಲ ಅಂತ ದೂರ ಕೂರಿಸುತ್ತಿದ್ದರು. ಕುಳಿತಲ್ಲೇ ಊಟ ತಿಂಡಿ ಮಾಡಿ ಕೊಡ್ತಿದ್ರು... ಪ್ರತಿ ತಿಂಗಳು ಆ ಮೂರು ದಿನಗಳಲ್ಲಿ ಮನೆಯ ಹಿತ್ತಲಲ್ಲಿ ಕುಳಿತು ತುಂಬು ಮುಜುಗರಕ್ಕೆ ಈಡಾಗುತ್ತಿದ್ದ ನನ್ನ ಪರಿಸ್ಥಿತಿ ನನ್ನ ಮೊಮ್ಮಗಳಿಗೆ ಬೇಡ. ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಅವಳು ತನ್ನನ್ನು ತಾನು ಸಂಭಾಳಿಸಿಕೊಳ್ಳಲು ಸಹಾಯ ಮಾಡಬೇಕು ಎಂದು ಮನದಲ್ಲಿ ಯೋಜಿಸಿದರು. ಕೂಡಲೇ ಮೊಮ್ಮಗಳನ್ನು ಬಳಿ ಕರೆದು ಕೂಡಿಸಿಕೊಂಡು ಆ ದಿನಗಳಲ್ಲಿ ಹೇಗೆ ಇರಬೇಕು ಎಂಬುದರ ಕುರಿತು ಆಕೆಗೆ ಅರಿವಾಗುವಂತೆ ನಿಧಾನವಾಗಿ ತಿಳಿ ಹೇಳುತ್ತಿರುವುದನ್ನು ಕಂಡು ಮನೆಯ ಎಲ್ಲಾ ಸದಸ್ಯರು ಅಚ್ಚರಿಯಿಂದ ಅಜ್ಜಿ ಮತ್ತು ಮೊಮ್ಮಗಳನ್ನು ನೋಡಿದರು. ಎಲ್ಲರ ದೃಷ್ಟಿ ತಮ್ಮತ್ತ ನೆಟ್ಟುದನ್ನು ಕಂಡು ಕಮಲಮ್ಮನವರು "ಹಾಗೆಲ್ಲ ನೋಡಬೇಡಿ, ನನ್ನ ಮೊಮ್ಮಗಳಿಗೆ ದೃಷ್ಟಿಯಾಗುತ್ತೆ ಎಂದು ಹುಸಿ ಮುನಿಸಿಕೊಂಡರೆ ಎಲ್ಲರೂ ಜೋರಾಗಿ ನಗುತ್ತಾ ತಂತಮ್ಮ ಕೋಣೆಗಳಿಗೆ ತೆರಳಿದರು. ಪ್ರಿಯಾ ಕೂಡ ಮೆಲ್ಲನೆ ಮುಗುಳ್ನಗುತ್ತಾ ಸನ್ನಿವೇಶಕ್ಕೆ ತಕ್ಕನಾದ "ಹೊಸ ಚಿಗುರು ಹಳೇ ಬೇರು ಕೂಡಿದರೆ ಮರ ಸೊಗಸು" ಎಂಬ ತನ್ನಿಷ್ಟದ ಭಾವಗೀತೆಯನ್ನು ಗುನುಗುತ್ತಾ ರಾತ್ರಿಯ ಅಡುಗೆ ತಯಾರಿಗೆ ಅಡುಗೆ ಕೋಣೆಯತ್ತ ನಡೆದಳು.

# ವಚನಗಳ ಸಂರಕ್ಷಣೆಯಲ್ಲಿ ಡಾ.ಫ.ಗು.ಹಳಕಟ್ಟಿಯವರ ಪಾತ್ರ ಆದರ್ಶವಾದುದು: ಮೇಯರ್ ಮುಲ್ಲಂಗಿ ನಂದೀಶ್

■ ಹಂಪಿ ಟೈಮ್ಸ್ ಬಳ್ಳಾರಿ

ಕನ್ನಡ ವಚನ ಸಾಹಿತ್ಯದ ಮೇರು ವಚನಕಾರ ಡಾ.ಫ.ಗು.ಹಳಕಟ್ಟಿ ಅವರು ಶತಮಾನಗಳ ವಚನ ಸಾಹಿತ್ಯವನ್ನು ಸಂರಕ್ಷಿಸಿಟ್ಟು, ಇಂದಿನ ಪೀಳಿಗೆಗೆ ಬಿತ್ತರಿಸಿರುವ ಅವರ ಪಾತ್ರ ಆದರ್ಶಮಯವಾಗಿದೆ ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಡಾ.ಫ.ಗುಹಳಕಟ್ಟಿಯವರ ಜನ್ಮದಿನ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಡಾ.ಫ.ಗು.ಹಳಕಟ್ಟಿಯವರು ಕನ್ನಡ ವಚನ ಸಾಹಿತ್ಯದ ಸರ್ವೋತೋಮುಖ ಬೆಳವಣಿಗೆಗೆ ಬುನಾದಿ ಹಾಕಿದವರು. ಮಹಾನರ ವಚನಗಳನ್ನು ಸಂರಕ್ಷಿಸಿ ಇಂದಿನ ಪೀಳಿಗೆಗೆ ಬಿತ್ತರಿಸಿದವರು ಎಂದರು.

ರಾಷ್ಟ್ರೀಯ ಬಸವ ದಳದ ಕಾರ್ಯದರ್ಶಿ ಜಿ. ಆರ್.ನಾಗರಾಜ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಡಾ.ಫ.ಗು ಹಳಕಟ್ಟಿಯವರು ವಚನಸಾಹಿತ್ಯದ ಮಹಾನ್ ವಚನಕಾರರಲ್ಲಿ ಒಬ್ಬರಾಗಿದ್ದು, ಅವರ ವಚನಗಳು ಕನ್ನಡ ಸಾಹಿತ್ಯ ಬೆಳೆವಣಿಗೆಗೆ ಸಹಕಾರಿಯಾಗಿವೆ ಎಂದು ತಿಳಿಸಿದರು.

12 ಶತಮಾನದ ವಚನ ಯುಗದಲ್ಲಿ ಬಿಡಿ-ಬಿಡಿಯಾಗಿದ್ದ ವಚನ ಸಾಹಿತ್ಯವನ್ನು ಒಗ್ಗೂಡಿಸಿ, ಕನ್ನಡ ವಚನ ಸಾಹಿತ್ಯ ರಕ್ಷಣೆ ಮಾಡುವುದರಲ್ಲಿ ಅವರ ಪಾತ್ರ ಬಹುಮುಖ್ಯವಾಗಿದೆ ಎಂದರು.

ಡಾ.ಫ.ಗು.ಹಳಕಟ್ಟಿಯವರು ಕನ್ನಡ ವಚನ ಸಾಹಿತ್ಯ ಕುರಿತು ಅಪಾರ ಪ್ರೇಮ ಬೆಳೆಸಿಕೊಂಡು ವಿದ್ಯಾಸಂಸ್ಥೆ ಹುಟ್ಟುಹಾಕಿ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿರುಗುಪ್ಪ ತಾಲ್ಲೂಕಿನ ರಾರಾವಿ ಗ್ರಾಮದ ಬಿ.ಚಿದಾನಂದ ತಂಡದಿಂದ ವಚನ ಸಂಗೀತ ನಡೆಯಿತು.

ಈ ವೇಳೆ ಮಹಾನಗರ ಪಾಲಿಕೆಯ ಉಪಮೇಯರ್ ಡಿ.ಸುಖುಂ, ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರರಾದ ಗೌಸಿಯಾ ಬೇಗಂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣ ಪರಿವೀಕ್ಷಕರಾದ ವಸುದೇವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಿಬ್ಬಂದಿಯವರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

## ಕವಿ ಮನಸು

### ನಾ ಮಂತ್ರಿಯಾಗುವೆ




ನಿದ್ದೆಯು ಬರುತಿದೆ ನನಗಮ್ಮ
ಬೇಗನೆ ಎಬ್ಬಿಸಿದೆ ನನಗೇಕಮ್ಮ
ಮೂಡುವ ರವಿಗೆ ನಿದ್ದೆ ಬರದೇನು
ಬರಲು ಅವಸರ ಅವನಿಗೆ ಬೇಕೇನು

ಗುರುಗಳು ಹೇಳಿದ ಪಾಠವನು
ನಿನ್ನೆಯ ರಾತ್ರಿ ಓದಿಲ್ಲ ನಾನು
ಬೆತ್ತದ ರುಚಿ ಎನಗೆ ಖಾಯಮ್ಮು
ಈ ದಿನ ಒಂದೇ ಶಾಲೆ ಬಿಡಿಸಮ್ಮ

ಓದಿನ ಕಿರಿ ಕಿರಿ ಎನಗೆ ಬೇಡಮ್ಮ
ನನ್ನ ಹೀಗೆ ದೊಡ್ಡವನ ಮಾಡಮ್ಮ
ರಾಜಕೀಯಕೆ ನಾನು ಸೇರುವೆನಮ್ಮ
ಶಿಕ್ಷಣವಿಲ್ಲದೇ ಮಂತ್ರಿ ಆಗುವೆನಮ್ಮ

– ಕೆ ಎಂ ಬಸವರಾಜ ಹೊಸಪೇಟೆ

### ಏಕೆ ಹೀಗಾದೇವು?



ಅದೇ ಭೂಮಿ ಅದೇ ಗಾಳಿ
ಮಾನವನ ಬುದ್ದಿ ದಿವಾಳಿ।

ಅದೇ ಬಾನು ಅದೇ ನೀರು
ಮನಸು ಬಲೂ ಸುಮಾರು।

ಅದೇ ಸೂರ್ಯ ಅದೇ ಚಂದ್ರ
ವಿಚಾರ ಮಾಡುವುದು ದರಿದ್ರ।

ಅದೇ ಜೀವ ಅದೇ ರಕ್ತ
ಅವನ ಬದುಕು ವ್ಯತಿರಿಕ್ತ।

ಅದೇ ಹಸಿವು ಅದೇ ದಣಿವು
ಹೃದಯದಲಿ ಬರೀ ವಿಷವು।

ಏಕೆ ಹೀಗಾದೆವು ನಾವುಗಳು
ಕ್ಷಣ ಕ್ಷಣ ಕೆಟ್ಟ ಯೋಚನೆಗಳು।

– ಚಂದ್ರಶೇಖರಯ್ಯ ರೋಣದಮಠ

### ಸಜ್ಜನರ ಒಡನಾಟ

ಬದುಕೊಂದು ಏಳು ಬೀಳಿನ ಆಟ
ಇರಲಿ ಸಜ್ಜನರ ಒಡನಾಟ
ಬೀರೋಣ ಅಕ್ಕರೆಯ ನೋಟ
ಸ್ನೇಹಿತರೊಂದಿಗೆ ಮಾಡೋಣ ಊಟ

ಸಜ್ಜನರ ಹಾದಿಯಲ್ಲಿ ನಡೆಯೋಣ
ದುರ್ಜನರ ಸಂಗದಿಂದ ದೂರವಿರೋಣ
ಸಜ್ಜನರ ಒಡನಾಟ ಹೆಜ್ಜೇನು ಸವಿದಂತೆ
ದುಂಬಿಯು ಹೂವಿನಿಂದ ಹೀರುವ
ಮಕರಂದದಂತೆ

ಸಜ್ಜನರ ಜೊತೆಯಿರೆ ಶ್ರೀಗಂಧದ ಪರಿಮಳ
ದುರ್ಜನರ ಸಂಗದಿಂದ ಬಾಳೆಲ್ಲಾ ತಳಮಳ
ಸದ್ವಿಚಾರದತ್ತ ಹರಿಸೋಣ ನಮ್ಮಯ ಚಿತ್ತ
ಭಗವಂತನ ರಕ್ಷಿಸುವನು ಈ ಜಗತ್ತ

– ಚೇತನ ಭಾರ್ಗವ ಬೆಂಗಳೂರು

# ಮಹಾಮಹಿಮ ಶ್ರೀ ಜಡೇಸಿದ್ಧ ಶಿವಯೋಗಿಗಳ ಲೀಲಾಮೃತ ಪುಸ್ತಕ ಅದ್ಭುತ ದೃಶ್ಯ ಕಾವ್ಯ

ಅದ್ಭುತ ಬರಹಗಾರರು, ನಾ ಕಂಡ ಸರಳ ಸಜ್ಜನಿಕೆಯ ಅಧಿಕಾರಿಗಳು, ಸಧ್ಯ ವಿಶ್ರಾಂತ ಜೀವನ ನಡೆಸುತ್ತಿರುವ ಗೌರವಾನ್ವಿತ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಡಯಟ್




ರಾಯಚೂರಿನ ನಿವೃತ್ತ ಪ್ರಾಚಾರ್ಯರು (ಮಹಿಮ) ಅವರು ರಚಿಸಿದ ಒಂದು ಅದ್ಭುತ ಕೃತಿ. ಇದನ್ನು ಬರೀ ಒಂದು ಕೃತಿ,ಪುಸ್ತಕ, ಅನ್ನುವ ಬದಲು ಅದನ್ನೊಂದು ದೃಶ್ಯ ಕಾವ್ಯ ಎನ್ನುವುದು ಸೂಕ್ತ ಎಂಬುದು ನನ್ನ ಅಭಿಮತ.

ಮಹಿಮರವರು ತಮ್ಮ ವಂಶಜರೇ ಆದ ಜಡೇಸಿದ್ಧ ಶಿವಯೋಗಿಗಳ ಬಗ್ಗೆ ಬರೆಯುತ್ತಿದ್ದಾರೆಂದು ಅವರ ಅತ್ಮೀಯ ವಲಯದಲ್ಲಿರುವ ನನಗೆ ತಿಳಿದಿರುವ ವಿಷಯವಾಗಿತ್ತು. ಅವರ ಓದುಗ ತಾನು ಓದುವುದನ್ನು ಮುಗಿಸುವವರೆಗೂ ಬಿಡದೇ ಹಿಡಿದಿಟ್ಟುಕೊಳ್ಳುವ ಕಾಂತೀಯ ಶಕ್ತಿ ಅವರ ಬರಹಕ್ಕಿದೆ. ಇಲ್ಲಿಯವರೆಗೆ ಫೇಸ್ ಬುಕ್ ನಲ್ಲಿ, ವಾಟ್ಸಪ್ ನಲ್ಲಿ, ಇತರೆ ಸೋಸಿಯಲ್ ಮೀಡಿಯಾಗಳಲ್ಲಿ ಅವರನ್ನು ಓದಿರುವ ನಾನು ಅವರ ಅಭಿಮಾನಿಯಾಗಿರುವುದಂತೂ ದಿಟ. ಅವರ ಬರಹದ ಚುಂಬಕ ಶಕ್ತಿಯೇ ಹಾಗೆ, ಅವರ ಕಥೆಗಳಾಗಲೀ, ಕಾವ್ಯವಾಗಲೀ, ಲೇಖನಗಳಾಗಲೀ ಓದಲು ಆರಂಬಿಸಿದರೆ ಮುಗಿಯುವವರೆಗೂ ಬಿಡುವಂತಿರಲ್ಲ. ಅಷ್ಟು ಆಕರ್ಷಕ ವಾಗಿರುತ್ತದೆ ಅವರ ಬರಹ. (ಎಲ್ಲೋ ಕೆಲವೊಮ್ಮೆ ತಮ್ಮ ಹಿರಿತನವನ್ನು ಮರೆತು ತುಂಟ ಹುಡುಗನಂತಾಗಿ ಬರೆಯುವುದಕ್ಕೆ ಒಬ್ಬ ಅಭಿಮಾನಿಯಾಗಿ ನನ್ನ ಆಕ್ಷೇಪವಿದೆ ಬಿಡಿ ಈಗ ಆ ಮಾತಿನ ಅವಶ್ಯಕತೆಯಿಲ್ಲ) ಅದರ ಸಾಲಿಗೆ ಮತ್ತೊಂದು ಸೇರ್ಪಡೆ "ಮಹಾಮಹಿಮ ಶ್ರೀ ಜಡೇ ಸಿದ್ಧ ಶಿವಯೋಗಿಗಳ ಲೀಲಾಮೃತ "ಎನ್ನುವ ಅಮೃತದಂತಹ ಪುಸ್ತಕ. ಒಬ್ಬ ಸಂತನಾಗಿ ಬದುಕಿದ, ಅವಧೂತ, ಮಹಾಶರಣ ಜಡೆಯ್ಯನವರ ಪವಾಡಗಳ ಸಂಕಲನ ಈ ಪುಸ್ತಕ ವಾದರೂ...... ಆ ಪವಾಡಗಳನ್ನು ನನ್ನಂತಹ ಆಸ್ತಿಕನೂ ಅಲ್ಲದ ಹಾಗೂ ನಾಸ್ತಿಕನೂ ಅಲ್ಲದ ಎಡಬಿಡಂಗಿಗಳಿಗೂ ಮನಮುಟ್ಟುವಂತೆ ಹೇಳುವ ಪರಿ ಇದೆಯಲ್ಲ? ಅಲ್ಲಿಯೇ ನಮ್ಮ ಮಹಿಮರವರು ಗೆಲ್ಲೋದು.

ನಾವೆಲ್ಲ ಬಹುಶಃ, ಮಂತ್ರಾಲಯದ ಗುರುರಾಯರನ್ನು, ಶಿರಡಿ ಸಾಯಿನಾಥನನ್ನು, ಪಂಡಿತ ಪಂಚಾಕ್ಷರಿ ಗವಾಯಿಗಳಂತ ಮಹಿಮರನ್ನೂ ಓದಿದವರೇನಲ್ಲ. ಆದರೆ ಅವರ ಲೀಲಾಮೃತಗಳನ್ನು ತೋರಿಸಿದ ಸಿನೆಮಾಗಳನ್ನು ನೋಡಿ ಅವರ ಮೇಲೆ ಭಕ್ತಿಯನ್ನು ಹೆಚ್ಚಿಸಿಕೊಂಡವರು. ಆದರೆ ಮಹಿಮ ಬರೆದಿರುವ ಈ "ಮಹಾಮಹಿಮ ಶ್ರೀ ಜಡೇ ಸಿದ್ಧ ಶಿವಯೋಗಿಗಳ ಲೀಲಾಮೃತ" ಎನ್ನುವ ಪುಸ್ತಕವಿದೆಯಲ್ಲ ಇದು ಮೂರು ತಾಸು ಅವರ ಪವಾಡಗಳನ್ನೆಲ್ಲ ಒಂದು ಸಿನೆಮಾದಂತೆ, ಒಂದೊಂದೇ ದೃಶ್ಯಗಳನ್ನು ನಮ್ಮ ಕಣ್ಣ ಮುಂದೆ ಎಳೆ ಎಳೆಯಾಗಿ ಬಿಚ್ಚಿಡುತ್ತಾ ಹೋಗುತ್ತದೆ. ಈ ಪುಸ್ತಕ ಇವತ್ತು ಪೋಸ್ಟ್ ಮೂಲಕ ನನ್ನ ಕೈ ಸೇರಿತು. ನನಗೆ ಗೊತ್ತಿತ್ತು ಹಿಡಿದರೆ ಬಿಡುವವರಲ್ಲ ಎಂದು ಅದಕ್ಕೇ ಮದ್ಯಾಹ್ನ ಉಂಡು, ಮಲಗಿ ಎದ್ದ ಮೇಲೇ ಪುಸ್ತಕ ಕೈಗಿಡಿದೆ. ಮೂರು ತಾಸಾಯಿತು ಈಗ ಪುಸ್ತಕ ಮುಚ್ಚಿ ಪೆನ್ನು ಕೈಗಿಡಿದಿದ್ದೇನೆ. ನನಗೆ ಮತ್ತೊಂದು, ಸಾಯಿನಾಥನ ಸಿನೆಮಾ, ರಾಯರ ಸಿನೆಮಾ ನೋಡಿದ ಅನುಭವವಾಯಿತು. ಅದಕ್ಕೇ ನಾನು ಹೇಳಿದ್ದು ಇದೊಂದು ದೃಶ್ಯಕಾವ್ಯ ಅಂತ.

ಬಳ್ಳಾರಿ ಜಿಲ್ಲೆಯ ಹಂದ್ಯಾಳ ಗ್ರಾಮ ಸಂಜಾತ ಜಡೆಯ್ಯನವರು ಮೊದಲೇ ಬೇಡವಾಗಿದ್ದ ಸಂಸಾರ ಬಂಧನವನ್ನು ತೊರೆದು, ಫಕೀರನಂತೆ ಊರೂರುಗಳನ್ನು ಅಲೆದು, ಮೂಢರ ಕಣ್ಣಿಗೆ ಅರೆಹುಚ್ಚನಂತೆ, ಇನ್ನೂ




ಕೆಲವರಿಗೆ ಹುಚ್ಚನಂತೆ ಕಂಡ ಶರಣರು. ಈ ಜಡೆಯ್ಯ ತಾತನವರ ಪವಾಡಗಳ, ಲೀಲೆಗಳ ಹೂರಣ ತುಂಬಿದ ಹೋಳಿಗೆ ಈ ಸವಿಯಾದ ಪುಸ್ತಕ.

ಅರೆಬರೆ ಬಟ್ಟೆ ತೊಡುತ್ತಿದ್ದ ಅಲೆಮಾರಿ ಫಕೀರ, ಒಮ್ಮೊಮ್ಮೆ ನಗ್ನವಾಗಿಯೇ ತಿರುಗುತ್ತಿದ್ದ ನಿಜ ಶರಣನ ಅದ್ಭುತ ಪವಾಡಗಳನ್ನಾಗಲೀ ಲೀಲೆಗಳನ್ನಾಗಲೀ ನಾನಿಲ್ಲಿ ಉಲ್ಲೇಖಿಸಲಾರೆ. ಕಾರಣ ಈ ಪುಸ್ತಕವನ್ನು ನೀವೂ ಓದಿ ನಿಜಾನಂದವನ್ನು ಅನುಭವಿಸಲಿ ಅನ್ನುವುದು ನನ್ನ ಅಭಿಲಾಷೆ ಅಷ್ಟೆ. ಆದರೆ ಅವರ ಪವಾಡಗಳು ಕೃತಿಕಾರರ ಸಮೂಹ ಸನ್ನಿಯಂಥ ಬರವಣಿಗೆಯಿಂದ ದೃಶ್ಯಗಳು ನಮ್ಮ ಕಣ್ಣ ಮುಂದೆ ಬರುತ್ತಾ ಹೋದಂತೆ ನಾನು ಥ್ರಿಲ್ಲಾಗಿರುವುದಂತೂ ಸತ್ಯ. ಕಾರಣ ಆ ಮಹಾ ಶರಣರು ನಾಗರಬೆಂಚಿ ಗ್ರಾಮಕ್ಕೆ ಬಂದು ಕೆಲ ದಿನ ನೆಲೆಸಿ ಹಲವಾರು ಪವಾಡಗಳನ್ನು ಮಾಡುತ್ತಾರೆ. ಆ ನಾಗರಬೆಂಚಿ ನನ್ನೂರು ಮಸ್ಕಿಗೆ ಹತ್ತಿದ ಊರು ನನ್ನ ಪರಮ ಗುರು ಅಮರಯ್ಯ ಮೇಷ್ಟ್ರ ಊರು. ಈಗ ನಾನು ಮೆಟ್ಟುತ್ತಿರುವ ಮಣ್ಣಿನಲ್ಲೇ ಆ ಮಹಾ ಮಹಿಮನೂ ನಡೆದಾಡಿರಬಹುದಲ್ಲವೇ .... ನಾ ಮೆಟ್ಟುವ ನೆಲ ಅದೆಂತ ಪುಣ್ಯ ಭೂಮಿಯಲ್ಲವೇ.... ಥ್ರಿಲ್ ಆಗದಿರುತ್ತದೆಯೇ.... ನೀವೇ ಹೇಳಿ. ಮುಂದೆ ಆ ಮಹಾ ವಿರಾಗಿ ಸಂಚರಿಸುತ್ತಾ ಸಂಚರಿಸುತ್ತಾ ನಮ್ಮ ಮೆಣೇದಾಳ ಗ್ರಾಮಕ್ಕೂ ಬಂದು ನೆಲೆಸುತ್ತಾರಂತೆ. ಮೆಣೇದಾಳ ನನ್ನ ತಂದೆಯ ಹುಟ್ಟೂರು. ಹೀಗಾಗಿ ನನ್ನ ತಂದೆಯ ಮನೆ, ಅಂಗಳ ನೆನಪಾಗಿ ನನ್ನ ಕಂಣಂಚು ವದ್ದೆಯಾಗಿದ್ದು ಸುಳ್ಳಲ್ಲ. ಮುಂದೆ ಗುರು ಸಿದ್ಧಾರೂಢರ ನೆಲೆ ಹುಬ್ಬಳ್ಳಿಗೂ ಬರುತ್ತಾರೆ. ನನಗೆ ವಿದ್ಯೆ, ಬುದ್ಧಿ ಕಲಿಸಿದ ನಾಡು ಈ ಹುಬ್ಬಳ್ಳಿ-ಧಾರವಾಡ ಹೀಗಾಗಿ ಈ ಕೃತಿ ನನಗೆ ತುಂಬಾ ತುಂಬಾ ಕನೆಕ್ಟ್ ಆಯ್ತು. ಕೃತಿಯ ಅಂತ್ಯದಲ್ಲಿ ಮಹಾಮಹಿಮರ ಅಂತಿಮ ದಿನಗಳನ್ನು ವಿವರಿಸುವಲ್ಲಿ ಲೇಖಕರು ಬರೀ ಲೇಖಕರಾಗಿಲ್ಲ. ಬಹುಶಃ ಆ ಜಡೇ ಶಿವಯೋಗಿಗಳೇ ಅವರೊಳಗೆ ಆವಾಹನೆಯಾಗಿ ಬರೆಸಿದಂತಿದೆ ಆ ದೃಶ್ಯಗಳು. ಅವರ ಮಹಿಮೆಗಳನ್ನು ಪವಾಡಗಳನ್ನು ಕಣ್ಣಿಗೆ ರಾಚುವಂತೆ ದೃಶ್ಯಗಳನ್ನಾಗಿ ಪರಿವರ್ತಿಸುವಲ್ಲಿ ಲೇಖಕರು ಗೆದ್ದಿದ್ದಾರೆ.

ಕೊನೆಯ ಹದಿನೆಂಟಿಪ್ಪತ್ತು ಪೇಜುಗಳಂತೂ....ಯೋಗಿಗಳು ಲಿಂಗದಲ್ಲಿ ಲೀನವಾಗುವ ದೃಶ್ಯಗಳೇ ಇವೆ. ಅಲ್ಲಿ ಹಾನಗಲ್ಲ ಕುಮಾರಸ್ವಾಮಿಗಳೂ ಸೇರಿದಂತೆ ನೂರಾರು ಶರಣರ ಕಣ್ಣಾಲೆಗಳು ಒದ್ದೆಯಾಗಿರುತ್ತವೆ ಜೊತೆಗೆ ನಮ್ಮವೂ ಕೂಡ. ಇಲ್ಲಿ ಲೇಖಕರ ಮೂಲಕ ಆ ಅವಧೂತ ಹೇಳಿಸಿರುವ ಕೆಲ ಮಾತುಗಳನ್ನು ನಾನು ಉಲ್ಲೇಖಿಸಲೇ ಬೇಕು

**ಸಮಾಧಿಯೇ ಸಮಾಧಾನ,**
**ಇವನ ನಿರ್ಗಮನ ಆನಂದದಾಯಕವಾದುದು,**
**ಆನಂದದಿಂದ ಕಳಿಸಬೇಕು, ಶಿವನಿಗದೇ ಪ್ರೀತಿ,**
**ಆನಂದವೇ ಶಿವ**
**ಕಾಯಕದೊಳನ್ನವ ಹುಡುಕಿ ಪಡೆಯಬೇಕು**
**ಶಿವ ಅಕ್ಕರದಿ ಅಪ್ಪಿಕೊಳ್ಳುವ ಮನೋ ಸೌಂದರ್ಯ ನಮ್ಮದಾಗಬೇಕು**

ಹೀಗೆ ಆಧ್ಯಾತ್ಮ ಶಿಖರದ ತುತ್ತ ತುದಿಯಲ್ಲಿ ಸದಾ ಆನಂದತುಲಿತರಾಗಿ ವಿಹರಿಸುವ ಶ್ರೇಷ್ಠ ಆತ್ಮಗಳಿಂದ ಮಾತ್ರ ಹೊರಬರಬಹುದಾದ ಮಾತುಗಳಿವು. ಕೃತಿಯ ಕೊನೆಯಲ್ಲಿ ಇಂತಹ ನೂರೆಂಟು ಪದ ಪುಂಜಗಳಿವೆ. ಶ್ರೀಶೈಲ ವನ್ನು ಲೇಖಕರು ಶ್ರೀಗಿರಿ ಎಂದು ಉಲ್ಲೇಖಿಸಿ ಓದುಗರ ಒಂದು ವಿಶಿಷ್ಟ ಪ್ರೀತಿ ಗಳಿಸುತ್ತಾರೆ. ಹೀಗೆ ಈ ಕೃತಿ ಓದಿದ ಮೇಲೆ, ಬಹುದಿನಗಳ ನಂತರ, ತುಂಬಾ ದಿನಗಳ ಹಿಂದೆ ನಡೆದ ಪವಾಡ ಪುರಷನೊಬ್ಬನ ಲೀಲೆಗಳ ಸವಿಯೂಟ ಉಂಡ ಅನುಭವವಾಗುವದಂತೂ ನಿಶ್ಚಿತ. ಅದನ್ನು ಸಾಧ್ಯವಾಗಿಸಿದ 'ಮಹಿಮ' ರಿಗೆ ಶರಣು ಶರಣಾರ್ಥಿ ಹೇಳುತ್ತಾ ನೀವೂ ಒಮ್ಮೆ ಈ ಕೃತಿಯನ್ನು ಓದಿ ಎಂದು ಬಿನ್ನಹಿಸಿಕೊಳ್ಳುತ್ತೇನೆ

ಮುಗಿಸುವ ಮುನ್ನ:- ಕೃತಿಯಲ್ಲಿ ಬರುವ ಒಂದು ಪ್ರಸಂಗದಲ್ಲಿ ಅಲ್ಪಮತಿಯಾದ ನನಗೆ ತಿಳಿಯದ್ದರ ಕುರಿತು, ಇಲ್ಲಿ ಹಾನಗಲ್ಲ ಕುಮಾರ ಸ್ವಾಮಿಗಳಿಗೆ -"ಈ ದೇಹವೇ ದೇಗುಲವಾಗಿರುವಾಗ, ಲಿಂಗವಾಗಿರುವಾಗ ಕಣ್ಣಿಗೆ ಕಾಣುವಂತೆ ಕೊರಳಲ್ಲಿ ಲಿಂಗವನ್ನು ಧರಿಸಬೇಕೆ? ಎಂಬ ಜಿಜ್ಞಾಸೆ ಮೂಡುತ್ತದೆ. ಅದಕ್ಕೆ ಪರಿಹಾರ ಕಂಡುಕೊಳ್ಳಲು ಅವರು ಅವಧೂತ ಶ್ರೀ ಜಡೇ ಸಿದ್ಧಶಿವಯೋಗಿಗಳ ಹತ್ತಿರ ಬರುತ್ತಾರೆ. ಆಗ ಅವಧೂತರು ಕುಮಾರ ಸ್ವಾಮಿಗಳಿಗೆ "ಈಶ್ವರ ಸತ್ಯ, ಜಗನ್ಮಿಥ್ಯ ಕುಮಾರೇಶ, ದೇಹ ಲಿಂಗವಾಗುವವರೆಗೆ ಲಿಂಗ ಬೇಕೇ ಬೇಕು ಆಮೇಲೆ ಬಟಾ ಬಯಲು ,ನೀನು ಅವನು ಒಂದಾ" ಎನ್ನುವ ಮಾತಿನ ಉಲ್ಲೇಖವಿದೆ. ಈ ಮಾತಿನ ಒಳಾರ್ಥವನ್ನ ಅರಗಿಸಿಕೊಳ್ಳುವ ಶಕ್ತಿ ಅಲ್ಪ ಮತಿಯಾದ ನನ್ನಂಥವನಿಗಿಲ್ಲ. ಈ ಬಗ್ಗೆ ಸರ್ ಗೇ ಫೋನ್ ಮಾಡಿ ತಿಳಿದುಕೊಂಡರಾಯಿತು ಎಂದು ಫೋನಾಯಿಸಿದ್ದೆ. ಸರ್ ಫೋನ್ ಸ್ವಿಚ್ ಆಫ್ ಬಂತು. ಇರಲಿ ನಾಳೆ ಸಿಕ್ಕಾರು. ತಿಳಿದುಕೊಳ್ಳುವೆ. ಅಲ್ಲಿಯವರೆಗೆ ಇಂಥ ಕೃತಿ ನೀಡಿದ ಅವರಿಗೆ ವಂದಿಸುವೆ.

– **ಆದೆಪ್ಪ ಹೆಂಬಾ** ನಿಕಟಪೂರ್ವ ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ ಮಸ್ಕಿ

# ದುಶ್ಚಟ ದುರ್ಗುಣ ತ್ಯಜಿಸಿದವರ ಬಾಳು ಸುಂದರ

ರಾಮಾಯಣ, ಮಹಾಭಾರತ, ಪುರಾಣ ಇತಿಹಾಸ ಕಾಲದಿಂದ ಅವಲೋಕಿಸಿದಾಗ ತಪ್ಪು ಅಥವಾ ಅಪರಾಧಗಳು ಘಟಿಸಿದ ಮತ್ತು ಅವುಗಳಿಗೆ ಕ್ಷಮೆ, ಪಶ್ಚಾತ್ತಾಪ, ಶಿಕ್ಷೆ, ಶಾಪ ಕೊಡುವುದು, ಜತೆಗೆ ಶಾಪ ವಿಮೋಚನೆ ಅಂದರೆ ಶಾಪ ಪರಿಹಾರ ಎಲ್ಲವೂ ಕಂಡುಬರುತ್ತವೆ.

ಆದರೆ ಈ ತಪ್ಪುಗಳು, ಪ್ರಮಾದಗಳು, ಮಹಾ ಅಪರಾಧಗಳು ಸಂಭವಿಸಲು ಮೂಲ ಕಾರಣ ನಮ್ಮಮನಸ್ಸು ಮತ್ತು ಇಂದ್ರೀಯಗಳ ಹತೋಟಿ ಇಲ್ಲದಿರುವುದೇ ಕಾರಣ ಎಂದು ಗೀತೋಪದೇಶದಲ್ಲಿದೆ.(6/6)

**ಬಂಧುರಾತ್ಮಾತ್ಮನಸ್ತಸ್ಯ**
**ಯೇನಾತ್ಮೈವಾತ್ಮನಾ ಜಿತಃ ।**
**ಅನಾತ್ಮನಸ್ತು ಶತ್ರುತ್ವೇ**
**ವರ್ತೇತಾತ್ಮೈವ ಶತ್ರುವತ್.।।**

ಯಾರು ತಮ್ಮಲ್ಲಿರುವ ಮನಸ್ಸು, ಇಂದ್ರೀಯಗಳನ್ನು ಗೆದ್ದಿರುವರೋ ಅವರು ತಮಗೆ ತಾವೇ ಮಿತ್ರರಾಗಿರುತ್ತಾರೆ. ಮತ್ತು ಯಾರು ಅವುಗಳನ್ನು ಜಯಿಸದೇ ಅವುಗಳ ದಾಸರಾಗುವರೋ ಅವರು ತಮಗೆ ತಾವೇ ಶತ್ರುವಾಗಿರುತ್ತಾರೆ. ಬಾಹ್ಯ ನೋಟಕ್ಕೆ ಯಾರು ಅತ್ಯಂತ ಶ್ರೀಮಂತರು, ಗೌರವಾನ್ವಿತರು, ಪ್ರಭಾವಶಾಲಿಗಳು ಮತ್ತು ಐಷಾರಾಮಿ ಜೀವನ ಸಾಗಿಸುತ್ತಿದ್ದಾರೆಂದು ಗೋಚರಿಸುತ್ತದೆಯೋ, ಅಂಥವರ ಮನಸ್ಸು ಖಿನ್ನತೆ, ದ್ವೇಷ, ಆವೇಗ, ಸಿಟ್ಟು, ದುಡುಕು ನಿರ್ಧಾರ ಅಥವಾ ಕೆಟ್ಟ ಆಲೋಚನೆಯಿಂದ ಕೂಡಿರುವುದೋ ಅವರಿಗೆ ಹೊರಗಿನ ವೈರಿಗಳಿಗಿಂತ ಅವರ ಆಂತರಿಕ ದುರ್ಗುಣಗಳೇ ಶತ್ರುವಾಗಿ ಪರಿಣಮಿಸುತ್ತವೆ. ಇಂಥಹ ಸ್ವಭಾವ ದವರಿಂದ ಪಾಪ ಕೃತ್ಯಗಳು ಜರುಗುತ್ತವೆ.



ಲಕುಮಿಸುತ ಸಾರವಾಡ
ಹೊಸಪೇಟೆ


Hampi Times E-paper
SCAN AND READ


ಪ್ರಸ್ತುತ ಪ್ರಪಂಚದಲ್ಲಿ ಮನುಷ್ಯ ಸಣ್ಣ ಪುಟ್ಟ ತಪ್ಪುಗಳು ಅಥವಾ ಕ್ಷಮಿಸಲು ಯೋಗ್ಯವಾದ ಪ್ರಮಾದಗಳನ್ನು ಎಸಗಿದ್ದರೆ, ಹಿರಿಯರು ಅಥವಾ ಸಮಾಜದ ಮುಖಂಡರು ತಿಳುವಳಿಕೆ ಹೇಳಿ ಕ್ಷಮಿಸುವದು ಅಥವಾ ದಂಡ ಇತ್ಯಾದಿಗಳನ್ನು ವಿಧಿಸಿ ಸರಿದಾರಿಗೆ ತರುವ ಕಾರ್ಯ ಕೈಗೊಂಡು ತಿದ್ದಿಕೊಂಡು ಬದುಕಲು ಅವಕಾಶ ಮಾಡಿಕೊಡುತ್ತಾರೆ. ಒಂದು ವೇಳೆ ಮಹಾಅಪರಾದವೆಸಗಿದ್ದರೆ, ಕಾನೂನಾತ್ಮಕವಾಗಿ ನ್ಯಾಯಾಲಯದಿಂದ ತಿರ್ಪಿಸಲಾಗುತ್ತದೆ. ತಪ್ಪು ಮಾಡಿದವರಿಗೆ ಜೈಲು ಶಿಕ್ಷೆ. ನ್ಯಾಯಾಲಯದಿಂದ ಅಪರಾಧಕ್ಕೆ ತಕ್ಕ ಶೀಕ್ಷೆಯಾಗಿ, ಶಿಕ್ಷೆ ಅನುಭವಿಸಲು ಜೈಲಿಗೆ ಕಳಿಸಲಾಗುತ್ತದೆ.

ಯಾರೇ ಕೈದಿಗಳಾಗಲೀ ಅವರು ಅದೃಷ್ಟದ ಕೈದಿಗಳಾಗಿರುವುದಿಲ್ಲ, ಬದಲಾಗಿ ಅವರ ಸ್ವಂತ ಮನಸ್ಸಿನ ಕೈದಿಗಳಾಗಿರುತ್ತಾರೆ. ಜೈಲಿನಲ್ಲಿರುವ ಕೈದಿಯ ಮನ ಪರಿವರ್ತಿಸಲು ಈ ಶಿಕ್ಷೆಯ ರೂಪದ ಪಾಠ. ಅದನ್ನು ಅಪರಾಧಿಯು ಮನಸಾರೆ ಅರಿತು, ಪಶ್ಚಾತ್ತಾಪ ಹೊಂದಿ, ಮನಸ್ಸು ಬದಲಾಯಿಸಿ, ಹೊಸ ಬದುಕು ಕಟ್ಟಿಕೊಳ್ಳಲು ದೃಢ ನಿರ್ಧಾರ ಮಾಡಬೇಕು. ಹಾಗೂ ಅಲ್ಲಿದ್ದುಕೊಂಡೇ ತನ್ನ ಧ್ಯೇಯ ಧೂರಣೆ ಗಳನ್ನು, ಹಾಗೂ ಮನಸ್ಸು ಪರಿವರ್ತಿಸಿ ಕೊಂಡು, ಶಿಕ್ಷೆ ಅನುಭವಿಸು ವಾಗಲೂ, ತನ್ನ ಗುಣ ಬದಲಾವಣೆಯನ್ನು ಖಚಿತ ಪಡಿಸಿದರೆ, ಶಿಕ್ಷೆ ಪ್ರಮಾಣ ಕೂಡಾ ಕಡಿಮೆ ಯಾಗುವದುಂಟು. ಹೊರಗೆ ಬಂದನಂತರ ದ್ವೇಷ, ಆಸೆ, ಅಸೂಯೆ, ಮತ್ಸರ, ವೈರತ್ವ, ದುಶ್ಚಟಗಳಂತಹ ಎಲ್ಲ ದುರ್ಗುಣಗಳನ್ನು ತ್ಯಜಿಸಿ, ಅವಮಾನಗಳನ್ನು ಸಹಿಸಿಕೊಂಡು, ಪ್ರಾಮಾಣಿಕವಾಗಿ ಸಮಾಜದಲ್ಲಿ ಬದಲಾಗಿ ತೋರಿಸುವ ಅವಕಾಶ ಇರುತ್ತದೆ. ಆದರೆ ಸಮಾಜ ಅಷ್ಟು ಬೇಗನೇ ಒಪ್ಪಿಕೊಳ್ಳುವುದಿಲ್ಲ. ಬದಲಾವಣೆಯ ಸ್ವಭಾವದಿಂದ, ತಾಳ್ಮೆಯಿಂದ, ವರ್ತಿಸಿದರೂ ಕೂಡಾ ತಕ್ಷಣದ ಫಲಿತಾಂಶ ದೊರೆಯದು. ಅದಕ್ಕೆ ವಿಚಲಿತನಾಗದೇ ತನ್ನ ಬದಲಾದ ಮನೋಭಾವನೆಯಿಂದ ಸಹಿಸಿಕೊಂಡು ಕಾರ್ಯ ಪ್ರವರ್ತನಾಗಬೇಕು. ಬಂಧು ಬಾಂಧವರು ಮತ್ತು ಸಮಾಜದಲ್ಲಿ ಪುನರ್ ನಂಬಿಕೆ ಗಳಿಸಲು ತುಂಬಾ ತುಂಬಾ ಸಮಯ ಬೇಕು. ಸಾಧ್ಯವೇ ಇಲ್ಲ ಎಂಬ ಮಾತೇನಿಲ್ಲ. ಕಾಲಕ್ರಮೇಣ ಉತ್ತಮ ಮನುಷ್ಯನಾಗಿ ಬದುಕಲು ಸಾಧ್ಯವಿದೆ.



**ಅಪಿ ಚೇದಸಿ ಪಾಪೇಭ್ಯಃ**
**ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ।।**

ಬೇರೆ ಎಲ್ಲ ಪಾಪಗಳಿಗಿಂತ, ಹೆಚ್ಚು ಪಾಪಗಳನ್ನು ಮಾಡುವವನಾಗಿದ್ದರೂ ಜ್ಞಾನರೂಪಿ ಎಂಬ ದೋಣಿಯ ಮುಖಾಂತರ ತನ್ನ ಸಂಪೂರ್ಣ ಪಾಪ ಸಮುದ್ರವನ್ನು ಖಂಡಿತವಾಗಿಯೂ ದಾಟಬಹುದು ಎಂದು ಶ್ರೀಕೃಷ್ಣನು ಗೀತೆಯಲ್ಲಿ (4/36)ಉಪದೇಶಿಸಿದ್ದಾನೆ.

ಈ ರೀತಿ ಮನುಷ್ಯನು ತಪ್ಪಿನ ಶಿಕ್ಷೆ ಅನುಭವಿಸಿ, ಪಶ್ಚಾತ್ತಾಪ ಹೊಂದಿ, ದೈವತ್ವ ಭಾವನೆಯಿಂದ ತನ್ನ ಬದಲಾದ ಅರಿವಿನ ಶಕ್ತಿ, ಜ್ಞಾನದಿಂದ ಮನಸ್ಸು ಮತ್ತು ಇಂದ್ರೀಯಗಳನ್ನು ಹತೋಟಿಯಲ್ಲಿಟ್ಟಕೊಂಡು ಸತ್ಕರ್ಮದೊಂದಿಗೆ ಅತ್ಯಂತ ತಾಳ್ಮೆಯಿಂದ, ಹೊಸ ಮನುಷ್ಯನಾಗಿ ಹೊಸ ಬದುಕು ಕಟ್ಟಿಕೊಂಡು ಮಾದರಿಯಾಗಿ ಜೀವನ ಸಾಗಿಸಿ, ಯಶಸ್ವಿಯಾದರೆ, ದೇವರೂ ಕೂಡಾ ಕ್ಷಮಿಸುತ್ತಾನೆ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ | ಸಂವತ್ಸರ: ಕ್ರೋಧಿ

**03–07–2024 – ಬುಧವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣಿ |
| ಯೋಗ | : ಶೂಲ |
| ಕರಣ | : ತೈತುಲ |
| ಸೂರ್ಯೋದಯ | : 05:46:50 |
| ಸೂರ್ಯಾಸ್ತ | : 19:15:39 |
| ರಾಹು | : 12:31–14:12 |
| ಯಮಘಂಡ | : 07:28–09:09 |
| ಗುಳಿಕ | : 10:50–12:31 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 02–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.87 ಅಡಿ |
| ಒಳ ಹರಿವು | 13410 ಕ್ಯುಸೆಕ್ |
| ಹೊರ ಹರಿವು | 297 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.909 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.53 ಅಡಿ |
| ಒಳ ಹರಿವು | 279 ಕ್ಯುಸೆಕ್ |
| ಹೊರ ಹರಿವು | 1149 ಕ್ಯುಸೆಕ್ |
| ಸಾಮರ್ಥ್ಯ | 3.013 ಟಿಎಂಸಿ |

# ಪಟ್ಟಣದಲ್ಲಿ ಮತ್ತೇ ಕರಡಿ ಪ್ರತ್ಯಕ್ಷ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಪಟ್ಟಣದ ಎಪಿಎಂಸಿ ಆವರಣದಲ್ಲಿ ಮಂಗಳವಾರ ಬೆಳಗಿನ ಜಾವ 3 ರಿಂದ 4 ಗಂಟೆಯ ವೇಳೆಗೆ ಕರಡಿಯೊಂದು ರಾಜಾರೋಷವಾಗಿ ಹೆಜ್ಜೆಹಾಕುತ್ತಿದ್ದನ್ನು ಕಂಡ ನಾಯಿಗಳು ಕರಡಿಯನ್ನು ಹಿಂಬಾಲಿಸಿ ಬೊಗಳಿವೆ. ನಿದ್ರೆಯಲ್ಲಿದ್ದ ಜನರು ಎಚ್ಚರವಾಗಿ, ಕರಡಿಯನ್ನು ನೋಡಿ ಗಾಬರಿಗೊಂಡು ಚೀರಾಡಿದ್ದಾರೆ.

ಕೂಡಲೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸ್ಥಳೀಯರು ಮಾಹಿತಿ ತಿಳಿಸಿದ ಬಳಿಕ, ಪ್ರಾದೇಶಿಕ ಉಪವಲಯ ಅರಣ್ಯ ಅಧಿಕಾರಿ ಕರಿಬಸಪ್ಪ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಭಯದಲ್ಲಿದ್ದ ಸಾರ್ವಜನಿಕರಿಗೆ ಧೈರ್ಯ ತುಂಬಿದ್ದಾರೆ. ಈ ಕರಡಿ ಬಹುತೇಕ ಕೆಚ್ಚಿನಬಂಡಿಯ ಮೂಲಕ ಹರದೇಗುಲದ ವ್ಯಾಪ್ತಿಯಲ್ಲಿ ಮಧ್ಯರಾತ್ರಿ 12 ಗಂಟೆಯ ಸಮಯದಲ್ಲಿ ಕಾಣಿಸಿಕೊಂಡಿದ್ದು, ಕೂಡ್ಲಿಗಿ ವೃತ್ತದ ಮೂಲಕ ಈ ಎಪಿಎಂಸಿ ರಸ್ತೆಗೆ ಬಂದಿದ್ದು, ಚಿಂತ್ರಪಳ್ಳಿ ಪ್ರದೇಶದ ಕಡೆ ಹೋಗಿರಬಹುದೆಂದು ಅಧಿಕಾರಿಗಳು ಊಹಿಸಿದ್ದಾರೆ. ಕಳೆದ ನಾಲ್ಕು ತಿಂಗಳ ಹಿಂದೆ ಹಗಲು ಹೊತ್ತಿನಲ್ಲಿಯೇ ಕರಡಿಯೊಂದು ಪ್ರಸಿದ್ಧಿ ಶಾಲಾ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆಯವರು ಸೆರೆಹಿಡಿಯುವ ಮುನ್ನವೇ ತಪ್ಪಿಸಿಕೊಂಡಿತ್ತು. ಈಗ ಮತ್ತೊಂದು ಕರಡಿ ಪ್ರತ್ಯಕ್ಷವಾಗಿ ಜನರ ನಿದ್ದೆ ಕೆಡಿಸಿದೆ.

# ಆತ್ಮ ತೃಪ್ತಿಗೆ ಸಹಕಾರದ ಗುಣ ಬೆಳೆಸಿಕೊಳ್ಳಿ

## ಅರಸೀಕೆರೆ ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮಿಗಳು ಹೇಳಿಕೆ



**ಹಂಪಿ ಟೈಮ್ಸ್ ಹರಪನಹಳ್ಳಿ:**
ಭಕ್ತರ ತನು–ಮನ, ಧನ ಸಹಕಾರದಿಂದ ಅಕ್ಷರ ದಾಸೋಹದ ಜೊತೆ ಅನ್ನ ದಾಸೋಹವು ನಡೆಯುತ್ತಿರುವುದು ಎಂದು ಅರಸೀಕೆರೆ ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಅರಸೀಕೆರೆಯ ಕೋಲಶಾಂತೇಶ್ವರ ಮಠದಲ್ಲಿ ಮಂಗಳವಾರ ಹಳೆಯ ವಿದ್ಯಾರ್ಥಿಗಳಿಂದ ಆಹಾರ ಧಾನ್ಯಗಳನ್ನು ಸ್ವೀಕರಿಸಿ ಮಾತನಾಡಿದರು. ಅಕ್ಕಪಕ್ಕದ ಹಳ್ಳಿಗಳಿಂದ ವಿಧ್ಯಾಭ್ಯಾಸವನ್ನು ಮಾಡಲು ಅನೇಕ ವಿದ್ಯಾರ್ಥಿಗಳು ಮಠಕ್ಕೆ ಬರುತ್ತಾರೆ. ಮಧ್ಯಾಹ್ನ ಉಪವಾಸವಿದ್ದು ತರಗತಿ ಕೇಳಲು ನಿರಾಸಕ್ತಿಯನ್ನು ಹೊಂದುತ್ತಾರೆನ್ನುವ ಉದ್ದೇಶದಿಂದ ಅನ್ನದಾಸೋಹ ಪ್ರಾರಂಭಿಸಿ ದ್ದೇವೆ. ಮನುಷ್ಯನು ಸ್ವಾರ್ಥಿಯಾಗದೆ ಸಹಕಾರದ ಗುಣಗಳನ್ನು ಹೊಂದಿದಾಗ ಆತ್ಮ ತೃಪ್ತಿ ಹೊಂದಲು ಸಾಧ್ಯವೆಂದರು.

ಹಳೆಯ ವಿದ್ಯಾರ್ಥಿ ಸುನೀತ ಮಾತನಾಡಿ. ಶ್ರೀಗಳು ಕಠಿಣ ಪರಿಸ್ಥಿತಿಯಲ್ಲಿಯೂ ಮಕ್ಕಳಿಗೆ ಜ್ಞಾನರ್ಜನೆಯನ್ನು ನೀಡುವ ಸಂಕಲ್ಪದ ಜೊತೆಗೆ, ಅನ್ನದಾಸೋಹವನ್ನು ಪ್ರಾರಂಭಿಸಿದ್ದಾರೆ ಇದಕ್ಕೆ ಗ್ರಾಮದ ಹಾಗೂ ಮಠದಲ್ಲಿ ವಿಧ್ಯಾಭ್ಯಾಸವನ್ನು ಮಾಡಿ ಉನ್ನತ ಸ್ಥಾನದಲ್ಲಿರುವ ಎಲ್ಲರೂ ತಮಗೆ ಇಷ್ಟದಂತೆ ಮಠಕ್ಕೆ ಸಹಕಾರವನ್ನು ನೀಡಿದಾಗ ಬಡ ಮಕ್ಕಳ ಬಾಳಿಗೆ ಬೆಳಕು ನೀಡುವ ಕಾರ್ಯದಲ್ಲಿ ಕೈಜೋಡಿಸಿದಂತಾಗುತ್ತದೆ ಎಂದರು.

# ಹಂಪಿಯಲ್ಲಿ ದಾರಿ ತಪ್ಪಿಸುವ ಮಾರ್ಗಸೂಚಿ ಬೆಟ್ಟ ಹತ್ತಿಳಿದು ಹೈರಾಣಾಗುತ್ತಿರುವ ಪ್ರವಾಸಿಗರು






**ಹಂಪಿ ಟೈಮ್ಸ್ ಹೊಸಪೇಟೆ :** ವಿಶ್ವಪಾರಂಪರಿಕ ತಾಣ ಹಂಪಿಯನ್ನು ನೋಡಲು ನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಏಕಾಂಗಿಯಾಗಿ ಆಗಮಿಸುವ ಅನೇಕ ವಿದೇಶಿಗರು ಸೇರಿದಂತೆ ದೇಸಿ ಪ್ರವಾಸಿಗರು ಪುರಾತತ್ವ ಇಲಾಖೆ ಸೂಚನ ಫಲಕಗಳನ್ನು ನೋಡಿ ಹೋದವರೆಲ್ಲಾ ವಿರೂಪಾಕ್ಷನ ದರ್ಶನ ಪಡೆಯುವಷ್ಟರಲ್ಲಿ ನಡೆದು ನಡೆದು ಹೈರಾಣಾಗುತ್ತಿದ್ದಾರೆ. ಸಮಸ್ಯೆ ಚಿಕ್ಕದಾದರೂ ಪ್ರವಾಸಿಗರು ಏದುಸಿರು ಬಿಡುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಸೂಚನ ಫಲಕಗಳನ್ನು ಸರಿ ಮಾರ್ಗತೋರುವಂತೆ ಹಾಕಬೇಕು ಎಂದು ಪ್ರವಾಸಿಗರು ಆಗ್ರಹಿಸಿದ್ದಾರೆ.

# ಸಾಂಪ್ರದಾಯಿಕ ಚಿಂತನೆ ಜೊತೆ ಸಮಾಜದ ವೈಚಾರಿಕ ಅಂಶಗಳು ಮುನ್ನೆಲೆಗೆ ಬಂದವು

## ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಎಲ್.ಎನ್.ಮುಕುಂದರಾಜ್ ಅಭಿಮತ



**ಹಂಪಿ ಟೈಮ್ಸ್ ಬಳ್ಳಾರಿ**
19 ಮತ್ತು 20ನೇ ಶತಮಾನವನ್ನು ಸಂಕ್ರಮಣ ಕಾಲವೆಂದು ಹೇಳಲಾಗುತ್ತಿದ್ದು, ಅಂದಿನ ಸಮಯದಲ್ಲಿ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಚಿಂತನೆಗಳ ಜೊತೆಗೆ ವೈಚಾರಿಕ ಸಮಾಜದ ಅಂಶಗಳು ಮುನ್ನೆಲೆಗೆ ಬಂದವು ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಎಲ್.ಎನ್. ಮುಕುಂದರಾಜ್ ಅವರು ಅಭಿಪ್ರಾಯ ಪಟ್ಟರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವ ವಿದ್ಯಾಲಯದಲ್ಲಿ ಇಂಗ್ಲೀಷ್ ಹಾಗೂ ಪ್ರದರ್ಶನ ಕಲೆಯ ನಾಟಕ ವಿಭಾಗದ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಕನ್ನಡ ಭಾಷೆಯ ಏಳುಬೀಳುಗಳ ಸವಾಲುಗಳು ಮತ್ತು ಸಾಹಿತ್ಯದ ಸಾಂದರ್ಭಿಕ ಸವಾಲುಗಳು' ಎಂಬ ವಿಷಯಗಳ ಮೇಲೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ, ಭಾಷೆ, ಪ್ರಾಂತ್ಯವಾರು ಪ್ರಾದೇಶಿಕ ವೈಶಿಷ್ಟ್ಯಗಳಿಂದ ತನ್ನದೇ ಆದ ಗಟ್ಟಿತನ ಒಳಗೊಂಡಿರುವುದರಿಂದ ಇಂದಿಗೂ ಕನ್ನಡ ಭಾಷೆ ನಿರಂತರವಾಗಿ ಮುಂದುವರೆಯುತ್ತಿದೆ. ಗಡಿಭಾಗದ ಭಾಷೆಗಳಲ್ಲಿ ದ್ವಿ ಭಾಷೆ ಪದ್ಧತಿಯನ್ನು ಅಳವಡಿಸಿಕೊಂಡು ಜನಸಾಮಾನ್ಯರ ದಿನನಿತ್ಯದ ಬದುಕಿಗೆ ಆಧಾರವಾಗಿರುವ ಭಾಷೆ ತಮ್ಮದೇ ಆದ ಅಸ್ತಿತ್ವಗಳೊಂದಿಗೆ ಉಳಿದುಕೊಂಡು ಬರುತ್ತಿವೆ ಎಂದರು.

ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಕೊಡುಕೊಳ್ಳುವಿಕೆಗಳು ಆರಂಭಗೊಂಡು ಹೊಸ ಸಂವೇದನೆಯು ಹರಿಯತೊಡಗಿದವು ಎಂದರಲ್ಲದೇ ಕನ್ನಡ ಸಾಹಿತ್ಯದ ಸಾಂದರ್ಭಿಕ ಸವಾಲುಗಳ ಕಣ್ಣ ಮುಂದೆ ಸಾಲುಗಟ್ಟಿ ನಿಂತಿವೆ.

ಕನ್ನಡದ ಭಾಷೆಯು ಕನ್ನಡದ ಸಾಹಿತ್ಯವನ್ನು ಹೊಂದಿಕೊಂಡುಪ್ರಾದೇಶಿಕವೈವಿಧ್ಯಮಯವಾಗಿ ವಿಜೃಂಭಿಸುತ್ತ ತನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಹಾಗಾಗಿ ಕನ್ನಡ ಭಾಷೆಯ ಸಾಹಿತ್ಯ ಮುಂದಿನ ಪೀಳಿಗೆಗೆ ಕನ್ನಡ ಗದ್ಯಗಳು, ಕನ್ನಡ ನಾಟಕ, ಕನ್ನಡ ಭಾವಗೀತೆ, ಕನ್ನಡ ಕವಿಗಳ ಪರಿಚಯಗಳನ್ನ ಮಕ್ಕಳಿಗೆ ಬಾಲ್ಯದಲ್ಲೇ ಕಲಿಸುವ ಮೂಲಕ ಉಳಿಸಿ ಬೆಳೆಸುವ ಮೂಲಕ ನಾವು ಗಟ್ಟಿಗೊಳಿಸಬೇಕಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರದರ್ಶನ ಕಲೆ ನಾಟಕ ವಿಭಾಗದ ಮುಖ್ಯಸ್ಥ ಪ್ರೊ.ಎನ್.ಶಾಂತನಾಯಕ್, ಆರನಕಟ್ಟೆ ಡಾ.ರಂಗನಾಥ್, ಡಾ.ವಾತ್ಸಲ್ಯ, ಡಾ.ಸಂತೋಷ್‌ಕುಮಾರ್, ಡಾ.ಅಣ್ಣಾಜಿ ಕೃಷ್ಣಾರೆಡ್ಡಿ, ಡಾ.ಶಿವಪ್ರಕಾಶ್, ಡಾ.ಸಹನಾ ಪಿಂಜಾರ್, ಡಾ.ಶಕೀಲ ಸೇರಿದಂತೆ ವಿವಿಧ ವಿಭಾಗದ ಉಪನ್ಯಾಸಕರುಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಕೈಮಗ್ಗ ಮತ್ತು ಜವಳಿ ಇಲಾಖೆ ಸ್ಥಳಾಂತರ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ತಾಲ್ಲೂಕು ಕಚೇರಿಯಲ್ಲಿರುವ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಚೇರಿಯನ್ನು ಕಾರಣಾಂತರಗಳಿಂದ ಜುಲೈ 01ರಿಂದ ಬೇರೆಡೆ ಸ್ಥಳಾಂತರಿಸಲಾಗಿದೆ.

ಹೊಸಪೇಟೆ ನಗರದ ಕೈಮಗ್ಗ ನೇಕಾರರ ಸಹಕಾರ ಸಂಘದ ಕಟ್ಟಡ, ನಂ.127, ಸಂಡೂರು ರಸ್ತೆ, ಎ.ಸಿ. ಕಚೇರಿ ಎದುರು, ಹೊಸಪೇಟೆ–583203 ಈ ವಿಳಾಸಕ್ಕೆ ಸ್ಥಳಾಂತರಿಸಲಾಗಿದ್ದು, ಜಿಲ್ಲೆಯ ನೇಕಾರರು ಹಾಗೂ ಸಾರ್ವಜನಿಕರು ಈ ಕಚೇರಿಗೆ ಭೇಟಿ ನೀಡಿ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ಸದುಪಯೋಗ ಪಡಿಸಿಕೊಳ್ಳಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು ಮೊ:9845906227,ಜವಳಿಪ್ರವರ್ಧನಾಧಿಕಾರಿ ಮೊ:9844837264ಗೆ ಸಂಪರ್ಕಿಸಬಹುದು.

# ಮೀನುಗಾರಿಕಾ ಇಲಾಖೆ ಯೋಜನೆಯಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲೆಯ ಮೀನುಗಾರಿಕೆ ಇಲಾಖೆಯಿಂದ 2024–25ನೇ ಸಾಲಿನ ರಾಜ್ಯ ವಲಯ ಯೋಜನೆಗಳಡಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯ ವಲಯ ಯೋಜನೆಗಳು: ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಯೋಜನೆಯಡಿ ಸಹಾಯಧನ ನೆರವು, ಮೀನುಮರಿ ಖರೀದಿಸಲು ನೆರವು ಯೋಜನೆ, ಕೆರೆ ಮತ್ತು ಜಲಾಶಯಗಳ ಅಂಚಿನ ಕೊಳಗಳಲ್ಲಿ ಮೀನುಮರಿ ಪಾಲನೆಗೆ ನೆರವು. ಅರ್ಹರು ಜುಲೈ 15ರೊಳಗೆ ಅಗತ್ಯ ದಾಖಲೆಗಳೊಂದಿಗೆ ಆಯಾ ಮೀನುಗಾರಿಕೆ ಇಲಾಖೆಯ ಕಚೇರಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕೂಡ್ಲಿಗಿ, ಹೆಚ್.ಬಿ.ಹಳ್ಳಿ, ಕೊಟ್ಟೂರು ತಾಲೂಕಿನ ಮಂಜುನಾಥ್ ಮೊ: 8217725319, ಹೊಸಪೇಟೆ, ಹಡಗಲಿ ತಾಲೂಕಿನ ಜಿ. ಶಾಂತಕುಮಾರ್, ಮೊ: 9620177588, ಹರಪನಹಳ್ಳಿ ತಾಲೂಕಿನ ಮಲ್ಲೇಶ್ ನಾಯ್, ಮೊ:8951531330 ಇವರಿಗೆ ಸಂಪರ್ಕಿಸಿ.

**SSV EXCELLENT**
**SPOKEN ENGLISH CLASS, HOSPET**
ಪ್ರಿಯ ಪೋಷಕರೇ ಹಾಗೂ ವಿದ್ಯಾರ್ಥಿಗಳೇ, ನಮ್ಮ SSV ಯಲ್ಲಿ 1ರಿಂದ 9ನೇ ತರಗತಿ ಓದುವ ಮಕ್ಕಳಿಗೂ ಮತ್ತು ಎಲ್ಲಾ ಸ್ಪರ್ಧಾತ್ಮಕ ಪರಿಕ್ಷೆ ಬರೆಯುವ ವಿದ್ಯಾರ್ಥಿಗಳಿಗಾಗಿ ಕಲಿಕೆಯ ತರಗತಿಗಳನ್ನು ನಡೆಸಲಾಗುತ್ತದೆ. ಆಸಕ್ತಿಯುಳ್ಳ ಪೋಷಕರು ಹಾಗೂ ವಿದ್ಯಾರ್ಥಿಗಳು ಇಂದೇ ನಿಮ್ಮ ಹೆಸರನ್ನು ನೋಂದಾಯಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
A. ಮೂರ್ತಿ–99863 38861
M.C. ಪ್ರೇಮ –91643 71478

# ಅಂಗನವಾಡಿ ಹುದ್ದೆ ಅಧಿಸೂಚನೆ ರದ್ದು

**ಹಂಪಿ ಟೈಮ್ಸ್ ಹೊಸಪೇಟೆ**
ಹರಪನಹಳ್ಳಿತಾಲೂಕಿನಅಂಗನವಾಡಿಗಳಲ್ಲಿಖಾಲಿಯಿರುವ7ಕಾರ್ಯಕರ್ತೆಯರು ಹಾಗೂ 24 ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಇತ್ತೀಚೆಗೆ ನಡೆಸಿದ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ನೇಮಕಾತಿಗೆ ಹೊರಡಿಸಲಾದ ಅಧಿಸೂಚನೆ (ಭೌತಿಕ)ಯ ನೇಮಕಾತಿ ಪ್ರಕ್ರಿಯೇ ತಾತ್ಕಾಲಿಕ ಪಟ್ಟಿಯನ್ನು ಹೊರಡಿಸದೇ ಇದ್ದಲ್ಲಿ ಅಂತಹ ಅಧಿಸೂಚನೆಯನ್ನು ರದ್ದುಪಡಿಸಿ ಆನ್‌ಲೈನ್ ಮೂಲಕ ನೇಮಕಾತಿ ಕೈಗೊಳ್ಳಲು ತಿಳಿಸಿರುತ್ತಾರೆ. ಹಾಗಾಗಿ ಆಫ್‌ಲೈನ್ ಅಧಿಸೂಚನೆಯನ್ನು ರದ್ದುಸಪಡಿಸಲಾಗಿದೆ ಎಂದು ಹರಪನಹಳ್ಳಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

# ವಿಕಲಚೇತನರಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024–25ನೇ ಸಾಲಿನಲ್ಲಿ 13 ಫಲಾನುಭವಿ ಆಧಾರಿತ ಸೌಲಭ್ಯಗಳನ್ನು ಒದಗಿಸಲು ಸುವಿಧಾ ಯೋಜನೆಯಡಿ ಡಿ.ಬಿ.ಟಿ. (ನೇರ ನಗದು ವರ್ಗಾವಣೆ) ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾವಂತ ವಿಕಲಚೇತನ ವಿದ್ಯಾಥಿಗಳಿಗೆ ಪ್ರೋತ್ಸಾಹಧನ ಯೋಜನೆ, ಶಿಶುಪಾಲನ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ್ ಯೋಜನೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಪುರಸ್ಕಾರ, ವೈದ್ಯಕೀಯ ಪರಿಹಾರ ನಿಧಿ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್ ಟಾಪ್, ದೈಹಿಕ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿಚಕ್ರ ವಾಹನ, ಸಾಧನ ಸಲಕರಣೆಗಳ ಯೋಜನೆ, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ, ದೃಷ್ಠಿ ದೋಷ ಹೊಂದಿರುವ ವಿಕಲಚೇತನರಿಗೆ ಬ್ರೈಲ್ ಕಿಟ್ ಯೋಜನೆಗಳಿಗೆ ಅರ್ಹ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿರುತ್ತದೆ. ಅರ್ಜಿ ಸಲ್ಲಿಸಲು ಇಚ್ಚಿಸುವರು ಅವಶ್ಯಕ ದಾಖಲೆಗಳನ್ನು, ಆನ್‌ಲೈನ್ ಮೂಲಕ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಸೇವಾ ಸಿಂಧು, (https:sevasindhu.karnataka.gov.in Sevasindhu DepartmentServicesKannad)ಪೋರ್ಟಲ್ ನಲ್ಲಿ ಅರ್ಜಿಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯತಿ ವಿಆರ್‌ಡಬ್ಲ್ಯೂ, ನಗರ ಸಭೆ, ಪಟ್ಟಣ ಪಂಚಾಯತಿಯಲ್ಲಿ ಯುಆರ್‌ಡಬ್ಲ್ಯೂ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಎಮ್‌ಆರ್‌ಡಬ್ಲ್ಯೂ ಇವರುಗಳನ್ನು ಹಾಗೂ ಸಂಡೂರು ರಸ್ತೆಯಲ್ಲಿರುವ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಕಾರ್ಯಾಲಯಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವಿಕಲಚೇತನರ ಇಲಾಖೆಯ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

# ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಪ್ರವೇಶಾತಿ: ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024–25 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಾರ್ಷಿಕ ಆದಾಯ ಮಿತಿ : ಪ್ರವರ್ಗ–1 ಎಸ್.ಸಿ ಮತ್ತು ಎಸ್.ಟಿ 2.50 ಲಕ್ಷ ರೂ. ಹಾಗೂ ಪ್ರವರ್ಗ 2ಎ, 2ಬಿ, 3ಎ,3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ 1. ಲಕ್ಷ ರೂ ನಿಗದಿಪಡಿಸಲಾಗಿದೆ.

ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನವಾಗಿರುತ್ತದೆ. ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣಾಧಿಕಾರಿಗಳು ಪರಿಶೀಲನೆ ಮಾಡಲು ಜುಲೈ 23 ಅಂತಿಮ ದಿನವಾಗಿರುತ್ತದೆ. ತಾಲೂಕು ಸಮಿತಿಯ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆಪಟ್ಟಿಯನ್ನು ಜುಲೈ 29ರಂದು ಪ್ರಕಟಿಸಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯಲು ಜುಲೈ 31 ಕೊನೆಯ ದಿನವಾಗಿರುತ್ತದೆ. ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ /ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:8050770004 ಮತ್ತು 8050770005 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

# ಜು.14 ಪಂಚಮಸಾಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ಹಂಪಿ ಟೈಮ್ಸ್ ಕೊಟ್ಟೂರು**
ಕೊಟ್ಟೂರು ವೀರಶೈವ ಲಿಂಗಾಯತ ಪಂಚಮಸಾಲಿ ಸಮಿತಿ ತಾಲೂಕು ಘಟಕ ಜು.14ರಂದು ಹಮ್ಮಿಕೊಂಡಿರುವ ಎಸ್ಸೆಸ್ಸೆಲ್ಸಿಯಲ್ಲಿ ಶೇ.85 ಮತ್ತು ಪಿಯುಸಿಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಪಡೆದ ಪ್ರತಿಭಾವಂತ ಪಂಚಮಸಾಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಚಾಪಿ ಚಂದ್ರಪ್ಪ ಕಾರ್ಯದರ್ಶಿ ಅಶೋಕ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಪಂಚಮಸಾಲಿ ಸಮಾಜದ ಹರಿಹರ ಪೀಠದ ವಚನಾನಂದ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ. 2023–24ನೇ ಸಾಲಿನಲ್ಲಿ ಉತ್ತೀರ್ಣಗೊಂಡ ಅರ್ಹ ವಿದ್ಯಾರ್ಥಿಗಳು ಜು.10 ರೊಳಗೆ ಅರ್ಜಿ ಸಲ್ಲಿಸಬಹುದು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿವೃತ್ತಗೊಂಡ ಪಂಚಮಸಾಲಿ ನೌಕರರಿಗೂ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9480059178, 9448404950 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳ ನೇಮಕ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳನ್ನು ನೇಮಕ ಮಾಡಲು ಆರ್ಹರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ತಿಳಿಸಿದ್ದಾರೆ. ಜಿಲ್ಲೆಯಾದ್ಯಂತ 182 ಗ್ರಾಮ ಒನ್ ಕೇಂದ್ರಗಳು ಮಂಜೂರು ಮಾಡಲಾಗಿದ್ದು, ಪ್ರಸ್ತುತ 153 ಕೇಂದ್ರಗಳು ಚಾಲನೆಯಲ್ಲಿವೆ. ಇನ್ನುಳಿದ ಕೇಂದ್ರಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜು. 15 ಕೊನೆಯ ದಿನವಾಗಿದೆ ಎಂದು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA